₹ 4 | ಪುಟ: 4 | ಸಂಪುಟ: 4 | ಸಂಚಿಕೆ 83 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 | Issue: 83 | Sunday, 14, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

# ಬೆಳಗಾವಿ: 18 ವಿಧಾನಸಭಾ ಕ್ಷೇತ್ರ

## 11–ಕಾಂಗ್ರೆಸ್, 7ಬಿಜೆಪಿ ಗೆಲುವು

ಜಿಲ್ಲೆಯ 18 ವಿಧಾನಸಭಾ ಕ್ಷೇತ್ರಗಳ ಫಲಿತಾಂಶ ಘೋಷಣೆಯಾಗಿದ್ದು, 11ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ, 7ರಲ್ಲಿ ಮಾತ್ರ ಬಿಜೆಪಿ ಗೆಲುವು ಕಂಡಿದೆ. ಫಲಿತಾಂಶದ ಪೂರ್ಣ ವಿವರಗಳು ಈ ಕೆಳಗಿನಂತಿವೆ.

2018ರ ಚುನಾವಣೆಯಲ್ಲಿ ಬಿಜೆಪಿ 10 ಮತ್ತು ಕಾಂಗ್ರೆಸ್ 8 ಸ್ಥಾನಗಳನ್ನು ಗೆದ್ದಿತ್ತು, ಆದರೆ ಮೂರು ವಿಜಯಶಾಲಿ ಕಾಂಗ್ರೆಸ್ ನಾಯಕರು ನಂತರ ಬಿಜೆಪಿಗೆ ಸೇರ್ಪಡೆಗೊಂಡರು.

**1) ಅಥಣಿ ವಿಧಾನಸಭಾ ಕ್ಷೇತ್ರ**



**ಕಾಂಗ್ರೆಸ್– ಲಕ್ಷ್ಮಣ ಸಂಗಪ್ ಸವದಿ–ಗೆಲುವು**

ಬಿಜೆಪಿ– ಮಹೇಶ ಕುಮಠಳ್ಳಿ– ಸೋಲು

ಜೆಡಿಎಸ್– ಶಶಿಕಾಂತ ಪಡಸಲಗಿ–ಸೋಲು

2018ರ ವಿಜೇತರು: ಮಹೇಶ ಕುಮಠಳ್ಳಿ (ಬಿಜೆಪಿ)

***

**2) ರಾಮದುರ್ಗ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ಅಶೋಕ ಪಟ್ಟಣ– ಗೆಲುವು**



ಬಿಜೆಪಿ– ಚಿಕ್ಕರೇವಣ್ಣ ಅಜ್ಜಪ್ಪ– ಸೋಲು

ಜೆಡಿಎಸ್– ಪ್ರಕಾಶ್ ಮುಧೋಳ– ಸೋಲು

2018ರ ವಿಜೇತರು: ಮಹಾದೇವಪ್ಪ ಯಾದವಾಡ (ಬಿಜೆಪಿ)

***

**3) ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ವಿಶ್ವಾಸ ವೈದ್ಯ– ಗೆಲುವು**



ಬಿಜೆಪಿ– ರತ್ನಾ ಮಾಮನಿ–ಸೋಲು

ಜೆಡಿಎಸ್– ಸೌರಭ ಚೋಪ್ರಾ– ಸೋಲು

2018ರ ವಿಜೇತರು: ಆನಂದ ಮಾಮನಿ (ಬಿಜೆಪಿ).

***

**4) ಕಿತ್ತೂರು ವಿಧಾನಸಭಾ ಕ್ಷೇತ್ರ**



**ಕಾಂಗ್ರೆಸ್– ಬಾಬಾಸಾಹೇಬ್ ಪಾಟೀಲ– ಗೆಲುವು**

ಬಿಜೆಪಿ– ದೊಡ್ಡಗೌಡರ ಮಹಾಂತೇಶ ಬಸವಂತರಾಯ– ಸೋಲು

ಜೆಡಿಎಸ್– ಅಶ್ವಿನಿ ಸಿಂಗಯ್ಯ ಪೂಜೇರ–ಸೋಲು

2018ರ ವಿಜೇತರು: ಮಹಾಂತೇಶ ದೊಡ್ಡಗೌಡ (ಬಿಜೆಪಿ).

***

**5) ಯಮಕನಮರಡಿ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ಸತೀಶ್ ಜಾರಕಿಹೊಳಿ– ಗೆಲುವು**



ಬಿಜೆಪಿ– ಬಸವರಾಜ ಹುಂದ್ರಿ– ಸೋಲು

ಜೆಡಿಎಸ್– ಮಾರಿತಿ ಅಷ್ಟಗಿ–ಸೋಲು

ಪಕ್ಷೇತರ– ಮಾರುತಿ ತಿಪ್ಪಣ್ಣ ನಾಯ್ಕ–ಸೋಲು

2018ರ ವಿಜೇತರು: ಸತೀಶ ಜಾರಕಿಹೊಳಿ (ಕಾಂಗ್ರೆಸ್)

***

**6) ಕುಡಚಿ ವಿಧಾನಸಭಾ ಕ್ಷೇತ್ರ**



**ಕಾಂಗ್ರೆಸ್– ಮಹೇಂದ್ರ ತಮ್ಮಣ್ಣವರ– ಗೆಲುವು**

ಬಿಜೆಪಿ– ಪಿ. ರಾಜೀವ–ಸೋಲು

ಜೆಡಿಎಸ್– ಆನಂದ ಮಾಳಗಿ– ಸೋಲು

2018ರ ವಿಜೇತರು: ಪಿ. ರಾಜೀವ (ಬಿಜೆಪಿ).

**

**7) ಕಾಗವಾಡ ವಿಧಾನಸಭಾ ಕ್ಷೇತ್ರ**



**ಕಾಂಗ್ರೆಸ್– ಭರಮಗೌಡ ರಾಜುಗೌಡ ಕಾಗೆ– ಗೆಲುವು**

ಬಿಜೆಪಿ– ಶ್ರೀಮಂತ ಪಾಟೀಲ–ಸೋಲು

ಜೆಡಿಎಸ್– ಮಲ್ಲಿಕಾರ್ಜುನ ಗುಂಜಿಗಾಂವಿ–ಸೋಲು

2018ರ ವಿಜೇತರು: ಶ್ರೀಮಂತ ಪಾಟೀಲ (ಬಿಜೆಪಿ)

***

**8) ಚಿಕ್ಕೋಡಿ ಸದಲಗಾ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ಗಣೇಶ ಹುಕ್ಕೇರಿ– ಗೆಲುವು**



ಬಿಜೆಪಿ– ಕತ್ತಿ ರಮೇಶ ವಿಶ್ವನಾಥ– ಸೋಲು

ಜೆಡಿಎಸ್– ಸುಹಾಸ ವಾಳಕೆ– ಸೋಲು

2018ರ ವಿಜೇತರು: ಗಣೇಶ ಹುಕ್ಕೇರಿ (ಕಾಂಗ್ರೆಸ್).

***

**9) ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ಲಕ್ಷ್ಮೀ ಹೆಬ್ಬಾಳ್ಕರ್– ಗೆಲುವು**



ಬಿಜೆಪಿ– ನಾಗೇಶ್ ಮುನ್ನೋಳ್ಕರ್– ಸೋಲು

ಜೆಡಿಎಸ್– ಶಂಕರಗೌಡ ಪಾಟೀಲ್– ಸೋಲು

***

**10) ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರ**

**ಕಾಂಗ್ರೆಸ್– ಆಸೀಫ್ ಸೇಠ್– ಗೆಲುವು**



ಬಿಜೆಪಿ– ಡಾ. ರವಿ ಪಾಟೀಲ– ಸೋಲು

ಜೆಡಿಎಸ್– ಶಿವಾನಂದ ಮುಗಳಿಹಾಳ–ಸೋಲು

2018ರ ವಿಜೇತರು: ಅನಿಲ ಬೆನಕೆ (ಬಿಜೆಪಿ)

***

**11) ಬೈಲಹೊಂಗಲ ವಿಧಾನಸಭಾ ಕ್ಷೇತ್ರ**



**ಕಾಂಗ್ರೆಸ್– ಮಹಾಂತೇಶ ಕೌಜಲಗಿ– ಗೆಲುವು**

ಬಿಜೆಪಿ– ಜಗದೀಶ ಮೆಟಗುಡ್ಡ– ಸೋಲು

ಜೆಡಿಎಸ್– ಶಂಕರ ಮಾಡಲಗಿ– ಸೋಲು

ಕಲ್ಯಾಣ ರಾಜ್ಯ ಪ್ರಗತಿ ಪಕ್ಷ– ಪ್ರಶಾಂತ ಜಕ್ಕಪ್ಪನವರ–ಹಿನ್ನಡೆ

2018ರ ವಿಜೇತರು: ಮಹಾಂತೇಶ ಕೌಜಲಗಿ (ಕಾಂಗ್ರೆಸ್).

******

**1) ನಿಪ್ಪಾಣಿ ವಿಧಾನಸಭಾ ಕ್ಷೇತ್ರ**



**ಬಿಜೆಪಿ– ಶಶಿಕಲಾ ಜೊಲ್ಲೆ–ಗೆಲುವು**

ಕಾಂಗ್ರೆಸ್– ಕಾಕಾಸಾಹೇಬ ಪಿ. ಪಾಟೀಲ–ಸೋಲು

ಜೆಡಿಎಸ್– ರಾಜು ಪವಾರ– ಸೋಲು

ಎಎಪಿ– ರಾಜೇಶ ಬನವಣ್ಣಾ– ಸೋಲು

2018ರ ವಿಜೇತರು: ಶಶಿಕಲಾ ಜೊಲ್ಲೆ (ಬಿಜೆಪಿ).

**

**2) ರಾಯಭಾಗ ಮೀಸಲು ವಿಧಾನಸಭಾ ಕ್ಷೇತ್ರ**



**ಬಿಜೆಪಿ– ದುರ್ಯೋಧನ ಐಹೊಳೆ– ಗೆಲುವು**

ಕಾಂಗ್ರೆಸ್– ಮಹಾವೀರ ಮೋಹಿತೆ–ಸೋಲು

ಜೆಡಿಎಸ್– ಪ್ರದೀಪಕುಮಾರ ಮಾಳಗಿ–ಸೋಲು

2018ರ ವಿಜೇತರು: ದುರ್ಯೋಧನ ಐಹೊಳೆ(ಬಿಜೆಪಿ).

**

**3) ಅರಭಾವಿ ವಿಧಾನಸಭಾ ಕ್ಷೇತ್ರ**

**ಬಿಜೆಪಿ– ಬಾಲಚಂದ್ರ ಜಾರಕಿಹೊಳಿ– ಗೆಲುವು**



ಕಾಂಗ್ರೆಸ್– ಅರವಿಂದ ದಳವಾಯಿ–ಸೋಲು

ಜೆಡಿಎಸ್– ಪ್ರಕಾಶ ಕಲಶೆಟ್ಟಿ–ಸೋಲು

ಪಕ್ಷೇತರ– ಸುಧಾ ಹಿರೇಮಠ–ಸೋಲು

ಬಿಎಸ್ಪಿ– ಬಸವಂತ ವಡೇರ–ಸೋಲು

2018ರ ವಿಜೇತರು: ಬಾಲಚಂದ್ರ ಜಾರಕಿಹೊಳಿ (ಬಿಜೆಪಿ).

***

**4) ಹುಕ್ಕೇರಿ ವಿಧಾನಸಭಾ ಕ್ಷೇತ್ರ**

**ಬಿಜೆಪಿ– ಪವನ ಕತ್ತಿ– ಗೆಲುವು**



ಕಾಂಗ್ರೆಸ್– ಎ.ಬಿ. ಪಾಟೀಲ– ಸೋಲು

ಜೆಡಿಎಸ್– ಬಸವರಾಜ ಪಾಟೀಲ–ಸೋಲು

2018ರ ವಿಜೇತರು: ಉಮೇಶ ಕತ್ತಿ (ಬಿಜೆಪಿ).

***

**5) ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರ**

**ಬಿಜೆಪಿ– ಅಭಯ ಪಾಟೀಲ– ಗೆಲುವು**



ಕಾಂಗ್ರೆಸ್– ಪ್ರಭಾವತಿ ಮಾಸ್ತಮರಡಿ–ಸೋಲು

ಜೆಡಿಎಸ್– ಶ್ರೀನಿವಾಸ ತಾಳೂಕರ–ಹಿನ್ನಡೆ

ಎಎಪಿ– ನೂರಹ್ಮದ ಮುಲ್ಲಾ–ಹಿನ್ನಡೆ

2018ರ ವಿಜೇತರು: ಅಭಯ ಪಾಟೀಲ (ಬಿಜೆಪಿ).

***

**6) ಗೋಕಾಕ ವಿಧಾನಸಭಾ ಕ್ಷೇತ್ರ**

**ಬಿಜೆಪಿ– ರಮೇಶ ಜಾರಕಿಹೊಳಿ– ಗೆಲುವು**



ಕಾಂಗ್ರೆಸ್– ಮಹಾಂತೇಶ ಕಡಾಡಿ– ಸೋಲು

ಪ್ರಜಾಕೀಯ– ಸುರೇಶ ಪಟ್ಟಣಶೆಟ್ಟಿ– ಸೋಲು

2018ರ ವಿಜೇತರು: ರಮೇಶ ಜಾರಕಿಹೊಳಿ (ಬಿಜೆಪಿ).

***

**7) ಖಾನಾಪೂರ ವಿಧಾನಸಭಾ ಕ್ಷೇತ್ರ**

**ಬಿಜೆಪಿ– ವಿಠ್ಠಲ ಸೋಮಣ್ಣ ಹಲಗೇಕರ–ಗೆಲುವು**



ಕಾಂಗ್ರೆಸ್– ಅಂಜಲಿ ನಿಂಬಾಳ್ಕರ್–ಸೋಲು

ಜೆಡಿಎಸ್– ಬಾಗವಾನ್ ನಾಸೀರ ಪೂಲ್ಸಾಬ್–ಸೋಲು

2018ರ ವಿಜೇತರು: ಅಂಜಲಿ ನಿಂಬಾಳ್ಕರ್ (ಕಾಂಗ್ರೆಸ್).

# ಕಾಂಗ್ರೆಸ್ ಪೂರ್ಣ ಬಹುಮತ

ಕಾಂಗ್ರೇಸ್: 136
ಬಿಜೆಪಿ: 65
ಜೆಡಿಎಸ್: 19
ಇತರೆ: 04

## ಒಂದನೇ ಸಚಿವ ಸಂಪುಟದಲ್ಲಿ ಐದು ಭರವಸೆ ಈಡೇರಿಸ್ತೇವೆ: ರಾಹುಲ್ ಗಾಂಧಿ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶದಲ್ಲಿ ಕಾಂಗ್ರೆಸ್ನ ದೊಡ್ಡ ಗೆಲುವಿನ ಬಗ್ಗೆ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿಕೆ ನೀಡಿದ್ದಾರೆ. ಕರ್ನಾಟಕದ ಜನತೆಗೆ, ಕಾರ್ಯಕರ್ತ–ರಿಗೆ, ನಾಯಕರಿಗೆ ಹಾಗೂ ಕರ್ನಾಟಕದಲ್ಲಿ ದುಡಿದ ಎಲ್ಲ ನಾಯಕರನ್ನ ಅಭಿನಂದಿಸುತ್ತೇನೆ ಎಂದು ಹೇಳಿದರು.

ಗೆಲುವಿನ ಕುರಿತು ಮಾತು ಮುಂದುವರೆಸಿದ ರಾಹುಲ್, 'ಬಡವರ ಶಕ್ತಿ ಇತ್ತು, ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಬಡವರ ಜೊತೆಗಿದೆ. ಈ ದೇಶ ಪ್ರೀತಿಯನ್ನ ಇಷ್ಟಪಡುತ್ತದೆ ಎಂದು ಕರ್ನಾಟಕ ಹೇಳಿದೆ. ಕರ್ನಾಟಕದಲ್ಲಿ ದ್ವೇಷದ ಮಾರುಕಟ್ಟೆ ಮುಚ್ಚಿದೆ, ಪ್ರೀತಿಯ ಅಂಗಡಿಗಳು ತೆರೆದಿವೆ. ಮೊದಲ ಸಚಿವ ಸಂಪುಟದಲ್ಲಿ ಮೊದಲ ದಿನವೇ 5 ಭರವಸೆಗಳನ್ನ ಈಡೇರಿಸುತ್ತೇವೆ' ಎಂದರು.

ಅಂದ್ಹಾಗೆ, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಕರ್ನಾಟಕದ ಜನತೆಗೆ 5 ಭರವಸೆಗಳನ್ನ ನೀಡಿದ್ದು, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎಲ್ಲ ಮಹಿಳೆಯ–ರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗುವುದು ಎಂದು ಕಾಂಗ್ರೆಸ್ ಹೇಳಿತ್ತು. ಇನ್ನು ಹೊಸ ಶಿಕ್ಷಣ ನೀತಿಯನ್ನು ರದ್ದುಪಡಿಸಿ ರಾಜ್ಯ ಶಿಕ್ಷಣ ನೀತಿ ಜಾ–ರಿಗೆ ತರಲಾಗುವುದು. 63 ಗಡಿ ತಾಲೂಕುಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನ ಅಭಿವೃದ್ಧಿ ಪಡಿಸಲಾಗುವುದು ಮತ್ತು ಎಲ್ಲಾ



ಸಮುದಾಯಗಳ ಆಶಯ ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ಮೀಸಲಾತಿಯ ಮಿತಿಯನ್ನ 50% ರಿಂದ 75% ಕ್ಕೆ ಹೆಚ್ಚಿಸಲಾಗುವುದು ಎಂದು ಪಕ್ಷವು ಹೇಳಿತ್ತು. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಕುಟುಂಬದ ಪ್ರತಿಯೊಬ್ಬ ಮಹಿಳೆಗೆ ಪ್ರತಿ ತಿಂಗಳು 2,000 ರೂಪಾಯಿ ಭತ್ಯೆ ನೀಡುವುದಾಗಿ ಭರವಸೆ ನೀಡಿತ್ತು. ಇದಲ್ಲದೇ ನಿರುದ್ಯೋಗಿ ಪದವೀಧರ–ರಿಗೆ ಮಾಸಿಕ 3 ಸಾವಿರ ರೂ., ನಿರುದ್ಯೋಗಿ ಡಿಪ್ಲೋಮಾದಾರ–ರಿಗೆ ಮಾಸಿಕ 1500 ರೂ.ಗಳನ್ನು ಎರಡು ವರ್ಷಗಳವರೆಗೆ ನೀಡಲಾಗುವುದು. ಇದಲ್ಲದೇ ರಾತ್ರಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿಗಳಿಗೆ ಪ್ರತಿ ತಿಂಗಳು 5000 ರೂ.ಗಳ ವಿಶೇಷ ಭತ್ಯೆ ನೀಡುವುದಾಗಿಯೂ ಘೋಷಿಸಲಾಗಿತ್ತು. ಇದೇ ವೇಳೆ ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಬಿಜೆಪಿ ಜಾ–ರಿಗೆ ತಂದಿರುವ ಜನವಿರೋಧಿ ಕಾನೂನು ಹಾಗೂ ಎಲ್ಲ ಅನ್ಯಾಯದ ಕಾನೂನುಗಳನ್ನ ರದ್ದುಗೊಳಿಸುವುದಾಗಿಯೂ ಘೋಷಿಸಿದರು.

## ಅಥಣಿ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ಲಕ್ಷ್ಮಣ್ ಸವದಿಗೆ ಗೆಲುವು



ಬೆಳಗಾವಿ: ಅಥಣಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸವದಿ ಬಿಜೆಪಿಯ ಮಹೇಶ್ ಕುಮಠಳ್ಳಿ ವಿರುದ್ಧ ಗೆಲುವು ಸಾಧಿಸಿದ್ದಾರೆ. ಟಿಕೆಟ್ ನಿರಾಕರಿಸುವ ಬಿಜೆಪಿ ನಿರ್ಧಾರದಿಂದ ಸವದಿ ಅಸಮಾಧಾನಗೊಂಡು ಕಾಂಗ್ರೆಸ್ ಸೇರಿದ್ದರು. ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಲಿಂಗಾಯತ ನಾಯಕರಾದ ಜಗದೀಶ್ ಶೆಟ್ಟರ್ ಹಾಗೂ ಲಕ್ಷ್ಮಣ ಸವದಿ ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದರು. ಸವದಿ ಭಾರೀ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಆದರೆ ಜಗದೀಶ್ ಶೆಟ್ಟರ್ ಸೋಲಿನತ್ತ ಮುಖ ಮಾಡಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ ಬಿಜೆಪಿ ನಾಯಕ ಮಹೇಶ್ ಈರನಗೌಡ ಕುಮಟಳ್ಳಿ ಶಾಸಕರಾಗಿದ್ದಾರೆ. 2018 ರಲ್ಲಿ ಕಾಂಗ್ರೆಸ್ ಟಿಕೆಟ್‌ನಲ್ಲಿ ಗೆದ್ದ ನಂತರ ಬಿಜೆಪಿಗೆ ಹಾರಿದ್ದ ಕಮಟಳ್ಳಿ 2019 ರ ಉಪಚುನಾವಣೆಯಲ್ಲಿಯೂ ಗೆದ್ದು ಬೀಗಿದ್ದರು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಹಾಗೂ ಹಾಲಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಮಹೇಶ್ ಕುಮಟಳ್ಳಿ ನಡುವೆ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಸವದಿಗೆ ಗೆಲುವು ಸಿಕ್ಕಿದೆ.

## ಕಾಂಗ್ರಸಗೆ ಶುಭ ಹಾರೈಸಿದ ಪ್ರಧಾನಿ ಮೋದಿ



ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಿದ ಕಾಂಗ್ರೆಸ್ ಪಕ್ಷಕ್ಕೆ ಅಭಿನಂದನೆಗಳು. ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಅವ–ರಿಗೆ ನನ್ನ ಶುಭಾಶಯಗಳು ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

ಕರ್ನಾಟಕ ಚುನಾವಣೆಯಲ್ಲಿ ನಮಗೆ ಬೆಂಬಲ ನೀಡಿದ ಎಲ್ಲರಿಗೂ ನಾನು ಧನ್ಯವಾದ ಹೇಳುತ್ತೇನೆ. ಬಿಜೆಪಿ ಕಾರ್ಯಕರ್ತರ ಶ್ರಮವನ್ನು ನಾನು ಪ್ರಶಂಸಿಸುತ್ತೇನೆ. ಮುಂದಿನ ದಿನಗಳಲ್ಲಿ ನಾವು ಕರ್ನಾಟಕಕ್ಕೆ ಇನ್ನಷ್ಟು ಹುರುಪಿನಿಂದ ಸೇವೆ ಸಲ್ಲಿಸುತ್ತೇವೆ ಎಂದು ಹೇಳಿದ್ದಾರೆ.

## ಇಂದು ಶಾಸಕಾಂಗ ಸಭೆ

### ಕಾಂಗ್ರೆಸ್ ಪೂರ್ಣ ಬಹುಮತ: ಪ್ರಮಾಣ ವಚನ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಬರದ ಸಿದ್ಧತೆ



ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಪೂರ್ಣ ಬಹುಮತ ಸಾಧಿಸಿದ ಹಿನ್ನೆಲೆಯಲ್ಲಿ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಭಾರೀ ಸಿದ್ಧತೆ ನಡೆಸಿದೆ. ಅಪಾರ ಗಣ್ಯ ವ್ಯಕ್ತಿಗಳ ಸಮ್ಮುಖದಲ್ಲಿ ಪ್ರಮಾಣವಚನಕ್ಕೆ ಸಿದ್ಧತೆ ನಡೆಯುತ್ತಿದೆ.

ಈಗಾಗಲೇ ಪೊಲೀಸ್ ಇಲಾಖೆಯಿಂದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸೂಕ್ತ ಬಂದೋಬಸ್ತ್ ಹಾಗೂ ಸಂಚಾರ ವ್ಯವಸ್ಥೆಯ ಬಗ್ಗೆ ಜಾಗೃತರಾಗುವಂತೆ ಹೇಳಲಾಗಿದೆ. ಇತ್ತ ಕಾಂಗ್ರೆಸ್ ಪಾಳಯದಲ್ಲೂ ಸರ್ಕಾರ ರಚನೆಯ ಚಟುವಟಿಕೆ ಗರಿಗೆದರಿದೆ. ಇಂದು ಶಾಸಕಾಂಗ ಸಭೆ ನಡೆಯುವ ಸಾಧ್ಯತೆ ಇದೆ. ಮುಂದಿನ ಕಾರ್ಯಕ್ರಮಗಳ ಬಗ್ಗೆ ಕೈ ನಾಯಕರು ಚರ್ಚಿಸುವ ಸಾಧ್ಯತೆ ಇದೆ.

ಪ್ರಮಾಣ ವಚನ ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸೋನಿಯಾ ಗಾಂಧಿ, ಎಂ.ಕೆ. ಸ್ಟಾಲಿನ್, ನಿತೀಶ್ ಕುಮಾರ್, ಲಾಲು ಪ್ರಸಾದ್ ಯಾದವ್, ತೇಜಸ್ವಿ ಯಾದವ್, ಶರತ್ ಪವಾರ್, ಉದ್ಧವ್ ಠಾಕ್ರೆ, ಭೂಪೇಶ್ ಭಾಘೇಲ್ ಅವರು ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೆ ಆಗಮಿಸುವ ಸಾಧ್ಯತೆ ಇದೆ.

ಚುನಾವಣಾ ಫಲಿತಾಂಶದ ಸದ್ಯದ ಟ್ರೆಂಡ್ ಪ್ರಕಾರ ಕಾಂಗ್ರೆಸ್ 131 ಸ್ಥಾನಗಳಲ್ಲಿ ಮುಂದಿದ್ದರೆ, ಬಿಜೆಪಿ 66 ಮತ್ತು ಜೆಡಿಎಸ್ 21 ಹಾಗೂ ಇತರೆ 6 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾರೆ. ಕಾಂಗ್ರೆಸ್ ಸ್ಪಷ್ಟಬಹುಮತ ಸಾಧಿಸಿದ್ದು, ಸರ್ಕಾರ ರಚನೆ ಮಾಡುವುದು ಬಹುತೇಕ ಫಿಕ್ಸ್ ಆಗಿದೆ.

## ಸೋಲಿನ ಜವಾಬ್ದಾರಿ ನನ್ನದೇ: ಬೊಮ್ಮಾಯಿ



ಹಾವೇರಿ: 'ಜನರ ಈ ತೀರ್ಪನ್ನು ಅತ್ಯಂತ ಗೌರವಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ಬಿಜೆಪಿಯ ಈ ಸೋಲಿನ ಜವಾಬ್ದಾರಿಯನ್ನು ರಾಜ್ಯದ ಮುಖ್ಯಮಂತ್ರಿಯಾಗಿ ನಾನೇ ಹೊರುತ್ತೇನೆ. ಇದನ್ನು ಯಾರ ಹೆಗಲಿಗೂ ಹಾಕುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿ ತಾಲ್ಲೂಕಿನ ದೇವಗಿರಿಯ ಮತ ಎಣಿಕೆ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿದ್ದ ಸಂದರ್ಭ ಮಾಧ್ಯಮದವರೊಂದಿಗೆ ಮಾತನಾಡಿ, 'ನಮ್ಮ ಪಕ್ಷದ ಸೋಲಿನ ಬಗ್ಗೆ ಸಂಪೂರ್ಣವಾದ ಪರಾಮರ್ಶೆ ಮಾಡುವ ಅವಶ್ಯ ಇದೆ.

ಇದಕ್ಕೆ ಹಲವಾರು ಕಾರಣಗಳಿವೆ. ಇದನ್ನು ಪಕ್ಷದಲ್ಲಿ ಆಂತರಿಕವಾಗಿ ಆತ್ಮಾವಲೋಕನ ಮಾಡುತ್ತೇವೆ' ಎಂದರು.

ಪ್ರತಿಯೊಂದು ಕ್ಷೇತ್ರದ ಬಗ್ಗೆ ಕೂಲಂಕಶವಾಗಿ ಪರಿಶೀಲನೆ ಮಾಡುತ್ತೇವೆ. ಏನೆಲ್ಲ ಸಮಸ್ಯೆ, ಕೊರತೆಗಳಾಗಿವೆ ಎಂಬುದನ್ನು ಪತ್ತೆ ಹಚ್ಚಿ ಸರಿಪಡಿಸುತ್ತೇವೆ. ಮತ್ತೆ ಸಂಘಟಿತರಾಗಿ 2024ರ ಲೋಕಸಭಾ ಚುನಾವಣೆಗೆ ಪಕ್ಷ ಪುಟಿದೇಳಲಿದೆ. ಕಾಂಗ್ರೆಸ್‌ನವರು ನಮಗಿಂತ ವ್ಯವಸ್ಥಿತವಾಗಿ ಚುನಾವಣೆ ಮಾಡಿದ್ದಾರೆ ಅನಿಸುತ್ತಿದೆ ಎಂದರು.

ಶಿಗ್ಗಾವಿ ಕ್ಷೇತ್ರದಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳಿಂದ ಜನರು ನನಗೆ ನಾಲ್ಕನೇ ಬಾರಿಗೆ ಬೆಂಬಲ ಕೊಟ್ಟಿದ್ದಾರೆ. ನಾನು ಇನ್ನಷ್ಟು ಜವಾಬ್ದಾ–ರಿಯಿಂದ ಕೆಲಸ ಮಾಡುತ್ತೇನೆ ಎಂದು ಹೇಳಿದರು.

## ಯಮಕನಮರಡಿಯಲ್ಲಿ 4ನೇ ಭಾರಿ ಗೆಲುವು ಸಾಧಿಸಿದ ಸಾಹುಕಾರ್

ಬೆಳಗಾವಿ: ಮೀಸಲಾತಿ ಕ್ಷೇತ್ರವಾದ ಯಮಕನಮರಡಿ ಕ್ಷೇತ್ರದಲ್ಲಿ ನಡೆದ ರಾಜಕೀಯ ಕಾಳಗದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ನಾಲ್ಕನೇ ಭಾರಿಗೆ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ಕ್ಷೇತ್ರದಲ್ಲಿ ಜಾರಕಿಹೊಳಿ ವರ್ಚಸ್ಸು ಕಡಿಮೆಯಾಗಿಲ್ಲ ಎಂಬುದನ್ನು ತೋರಿಸಿದ್ದಾರೆ.

ಹೌದು... ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರಿ ಹಾಗೂ ಜೆಡಿ–ಎಸ್ ಮಾರುತಿ ಅಷ್ಟಗಿ ಅವರ ವಿರುದ್ಧ ಗೆಲುವು ಸಾಧಿಸುವ ಮೂಲಕ ಯಮಕನಮರಡಿ ಕ್ಷೇತ್ರದಲ್ಲಿ ಗೆಲುವಿನ ಪತಾಕೆ ಹಾ–ರಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಸತೀಶ ಜಾರಕಿಹೊಳಿ 100,290. ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರಿ 43,079. ಜೆಡಿಎಸ್ ಮಾರುತಿ



ಅಷ್ಟಗಿ 19,567 ಮತಗಳನ್ನು ಪಡೆದಿದ್ದಾರೆ. ಮುಖ್ಯವಾಗಿ ಯಮಕನಮರಡಿ ಕ್ಷೇತ್ರದ ಚುನಾವಣೆ ಕುರಿತು ಕಳೆದ ದಿನಗಳ ಹಿಂದೆಯೇ "ಯಮಕನಮರಡಿ ಕ್ಷೇತ್ರದಲ್ಲಿ ಸಾಹುಕಾರ್ ಹಾದಿ ಸುಗಮ" ಎಂಬ ಲೇಖನವನ್ನು ಉದಯನಾಡು ವೆಬ್ ಸೈಟ್ ಪ್ರಕಟಗೊಳಿಸಿತ್ತು.ಈ ಹಿನ್ನೆಲೆಯಲ್ಲಿ 100ಕ್ಕೂ 100ರಷ್ಟು ಉದಯನಾಡು ಮಾಡಿರುವ ಸುದ್ದಿ ನಿಖರವಾಗಿದೆ ಎಂಬುವುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ.

ಕೈ ಕಾರ್ಯಕರ್ತರ ಸಂಭ್ರಮಾಚರಣೆ: ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳ ವಿರುದ್ಧ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ವಿಜಯಶಾಲಿಯಾದ ಪ್ರಯುಕ್ತ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಕ್ಷೇತ್ರದ ಎಲ್ಲಡೆ ಪಟಾಕಿ ಸಿಡಿಸಿ ಸಿಹಿ ಹಂಚುವುದರ ಮೂಲಕ ಸಂಭ್ರಮಾಚರಣೆ ನಡೆಸಿದರು. ಒಂದೇ ಕ್ಷೇತ್ರದಿಂದ ಸತತ ನಾಲ್ಕನೇ ಬಾರಿಗೆ ಅಭೂತಪೂರ್ವ ಗೆಲುವನ್ನು ಸಾಧಿಸುವುದರ ಮೂಲಕ ಕ್ಷೇತ್ರದಲ್ಲಿ ದಾಖಲೆಯನ್ನು ಬರೆದಂತಹ ಸತೀಶ ಜಾರಕಿಹೊಳಿ ಅವರಿಗೆ ಕ್ಷೇತ್ರದ ಮತದಾರರು ಅಭಿನಂದನೆ ಸಲ್ಲಿಸಿದ್ದಾರೆ.

## ಸೋಲು, ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸುತ್ತೇನೆ: ಹೆಚ್‌ಡಿ.ಕುಮಾರಸ್ವಾಮಿ



ಬೆಂಗಳೂರು: ರಾಜ್ಯದ ಜನತೆಯ ಆದೇಶವನ್ನು ನಾನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಾದೇಶವೇ ಅಂತಿಮ. ಸೋಲು, ಗೆಲುವನ್ನು ನಾನು ಸಮಚಿತ್ತದಿಂದ ಸ್ವೀಕರಿಸುತ್ತೇನೆಂದು ಜೆಡಿಎಸ್ ನಾಯಕ ಹೆಚ್‌ಡಿ.ಕುಮಾರಸ್ವಾಮಿಯವರು ಶನಿವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟ–ರ್ ನಲ್ಲಿ ಟ್ವೀಟ್ ಮಾಡಿರುವ ಅವರು, ರಾಜ್ಯದ ಜನತೆಯ ಆದೇಶವನ್ನು ನಾನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಾದೇಶವೇ ಅಂತಿಮ. ಸೋಲು, ಗೆಲುವನ್ನು ನಾನು ಸಮಚಿತ್ತದಿಂದ ಸ್ವೀಕ–ರಿಸುತ್ತೇನೆ.

ಆದರೆ, ಈ ಸೋಲು ಅಂತಿಮವಲ್ಲ, ನನ್ನ ಹೋರಾಟ ನಿಲ್ಲುವುದಿಲ್ಲ, ಸದಾ ಜನರ ಜತೆಯಲ್ಲೇ ಇರುತ್ತೇನೆ. ನಮ್ಮ ಪಕ್ಷವನ್ನು ಆಶೀರ್ವದಿಸಿದ ಮಹಾಜನತೆಗೆ ಅಭಿನಂದನೆಗಳು ಎಂದು ಹೇಳಿದ್ದಾರೆ.

ನನಗಾಗಲಿ, ನಮ್ಮ ಕುಟುಂಬಕ್ಕೆ ಆಗಲಿ ಸೋಲು, ಗೆಲುವು ಹೊಸದೇನಲ್ಲ. ಈ ಹಿಂದೆ ಶ್ರೀ ಹೆಚ್.ಡಿ.ದೇವೇಗೌಡರು, ಶ್ರೀ ಹೆಚ್.ಡಿ.ರೇವಣ್ಣ, ನಾನೂ ಸೋತಿ–ದ್ದೆವು. ಹಾಗೆಯೇ ಗೆದ್ದಾಗ ಬದ್ಧತೆಯಿಂದ ಜನಸೇವೆ ಮಾಡಿದ್ದೇವೆ.

ಮುಂದಿನ ದಿನಗಳಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಂಡು ಪಕ್ಷ ಕಟ್ಟುವ ಕೆಲಸ ಮಾಡುತ್ತೇನೆ.

## ನಿಜವಾದ ಕೋಡಿಮಠ ಶ್ರೀಗಳ ಚುನಾವಣಾ ಫಲಿತಾಂಶ ಭವಿಷ್ಯ



ಬೆಂಗಳೂರು: ಫಲಿತಾಂಶಕ್ಕೆ ಮುನ್ನ ಕೋಡಿಮಠ ಶ್ರೀಗಳು ರಾಜ್ಯ ರಾಜಕೀಯದ ಬಗ್ಗೆ ಹೇಳಿದ್ದ ಭವಿಷ್ಯ ಈಗ ಮತ್ತೆ ಚರ್ಚೆಗೆ ಬಂದಿದೆ. ಜನವ–ರಿಯಲ್ಲಿ ರಾಜ್ಯ ರಾಜಕೀಯದ ಬಗ್ಗೆ ಮಾತನಾಡಿದ್ದ ಕೋಡಿಮಠ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಜಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರಲ್ಲ, ಒಂದು ಪಕ್ಷ ಮಾತ್ರ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಿದ್ದರು. ಜೊತೆಗೆ ಈ ಬಾರಿ ಚುನಾವಣೆಯಲ್ಲಿ ಹಲವು ದೊಡ್ಡ ತಲೆಗಳು ಸೋಲು ಕಾಣಲಿವೆ ಎಂದು ಹೇಳಿರುವುದು ತೀವ್ರ ಕುತೂಹಲ ಕೆರಳಿಸಿದೆ.

ರಾಜ್ಯದ ರಾಜಕೀಯದ ಬಗ್ಗೆ ಭವಿಷ್ಯ ನುಡಿದಿದ್ದ ಅವರು, ಕರ್ನಾಟಕದಲ್ಲಿ ರಾಜಕೀಯ ಅಸ್ಥಿರದೆ ಇದೆ, ಚುನಾವಣೆವರೆಗೂ ಪಕ್ಷಾಂತರ ನಡೆಯುತ್ತಲೇ ಇರುತ್ತದೆ, ಎಲ್ಲಾ ಪಕ್ಷಗಳು ಹೊಂದಾಣಿಕೆಯಲ್ಲಿ ಹೋಗುವುದು ಕಷ್ಟ, ಚುನಾವಣೆವರೆಗೂ ಏನು ಹೇಳಲು ಸಾಧ್ಯವಿಲ್ಲ, ಎಲ್ಲ ಛಿದ್ರವಾಗುವ ಸಾಧ್ಯತೆ ಇದೆ, ಆದರೂ ಒಂದು ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಿದ್ದರು.

## ಕಾಂಗ್ರೇಸ್ ಅಭೂತಪೂರ್ವ ಗೆಲುವು: ಡಿಕೆ ಶಿವಕುಮಾರ್ ಭಾವುಕ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆ ಫಲಿತಾಂಶಯಲ್ಲಿ ಅಭೂತಪೂರ್ವ ಗೆಲುವಿನತ್ತ ಕಾಂಗ್ರೆಸ್ ಸಾಗಿದ್ದು, ಕಾಂಗ್ರೆಸ್ ಪಕ್ಷದ ಸಾಧನೆ ಕುರಿತು ಕಾರ್ಯಕರ್ತರು ಹಾಗೂ ಪಕ್ಷದ ನಾಯಕರಿಗೆ ಕೆಪಿಸಿಸಿ ಅಧ್ಯಕ್ಷ ಡಿಕೆ.ಶಿವಕುಮಾರ್ ಅವರು ಧನ್ಯವಾದ ಸಲ್ಲಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋನಿಯಾ ಗಾಂಧಿ, ರಾಹುಲ್



ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ತೆಕ್ಕೆಗೆ ಕರ್ನಾಟಕ ತರುವುದಾಗಿ ಪ್ರಮಾಣ ಮಾಡಿದ್ದೆ. ಜೈಲಿಗೆ ಬಂದು ಸೋನಿಯಾ ಅವರು ನನ್ನನ್ನು ಭೇಟಿ ಮಾಡಿದ್ದನ್ನು ಮರೆಯಲಾರೆ ಎಂದು ಭಾವುಕರಾದರು.

ಕಾಂಗ್ರೆಸ್ ಕಚೇರಿ ನಮಗೆ ದೇಗುಲವಿದ್ದಂತೆ. ನಮ್ಮ ಮುಂದಿನ ನಡೆ ಕುರಿತು ಪಕ್ಷದ ಕಚೇರಿಯಲ್ಲಿ ನಿರ್ಧಾರ ಕೈಗೊಳ್ಳುತ್ತೇವೆ. ಪಕ್ಷದ ಗೆಲುವಿಗೆ ಕಾರಣ–ರಾದ ಎಲ್ಲಾ ಕಾರ್ಯಕರ್ತರು, ಸಿದ್ದರಾಮಯ್ಯ ಸೇರಿ ಎಲ್ಲಾ ನಾಯಕರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆಂದು ಹೇಳಿದರು.

# ಸೋಲಿಗೆ ನಡ್ಡಾ ಪ್ರತಿಕ್ರಿಯೆ



ಬೆಂಗಳೂರು: ಬಿಜೆಪಿ ರಾಷ್ಟ್ರ ಘಟಕದ ಅಧ್ಯಕ್ಷ ಜೆ.ಪಿ ನಡ್ಡಾ ಅವರು ಕರ್ನಾಟಕ ವಿಧಾನಸಭೆ ಚುನಾವಣೆಯ ಸೋಲಿನ ಕುರಿತು ಶನಿವಾರ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.

ಚುನಾವಣೆಯಲ್ಲಿ ಸೋಲಾಗಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಜನರ ಒಳಿತಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದ್ದಾರೆ.

'ಬಿಜೆಪಿ ಕರ್ನಾಟಕದ ಜನತೆಯ ಆದೇಶವನ್ನು ನಮ್ರತೆಯಿಂದ ಸ್ವೀಕರಿಸುತ್ತದೆ. ಶ್ರದ್ಧೆಯಿಂದ ಶ್ರಮಿಸಿದ ಪಕ್ಷದ ಕಾರ್ಯಕರ್ತರಿಗೆ ಮತ್ತು ನಮ್ಮ ದೂರದೃಷ್ಟಿಯ ಮೇಲೆ ನಂಬಿಕೆ ಇಟ್ಟ ಜನರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಜನರ ಒಳಿತಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಮತ್ತು ರಚನಾತ್ಮಕ ವಿರೋಧ ಪಕ್ಷವಾಗಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತದೆ' ಎಂದು ನಡ್ಡಾ ಹೇಳಿದ್ದಾರೆ.

# ಸೋಲಿನ ಪರಾಮರ್ಶೆ : ಜೋಶಿ



ಹುಬ್ಬಳ್ಳಿ: 'ರಾಜ್ಯದಲ್ಲಿ ಬಿಜೆಪಿ ಸೋಲಿಗೆ ಬಹುಶಃ ಆಡಳಿತ ವಿರೋಧಿ ಅಲೆ ಕಾರಣವಾಗಿರಬಹುದು. ಶೀಘ್ರ ಕೋರ್ ಕಮಿಟಿ ಸಭೆ ನಡೆಸಿ ಎಲ್ಲಿ ಎಡವಿದ್ದೇವೆ ಎನ್ನುವ ಕುರಿತು ಚರ್ಚಿಸಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಸೋಲು, ಗೆಲುವು ಸಹಜ. ಸೋಲನ್ನು ಸವಾಲಾಗಿ ಸ್ವೀಕರಿಸಿ, ಮುಂದಿನ ಚುನಾವಣೆಗೆ ಸಂಘಟನಾತ್ಮಕವಾಗಿ ಸಿದ್ಧತೆ ನಡೆಸುತ್ತೇವೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜನರು ಕೊಟ್ಟ ತೀರ್ಪನ್ನು ವಿನಮ್ರದಿಂದ ಸ್ವೀಕರಿಸುತ್ತೇವೆ. ಕಾಂಗ್ರೆಸ್ ಸರ್ಕಾರ ರಚಿಸುವುದು ನಿಶ್ಚಿತವಾಗಿದ್ದು , ಪ್ರಣಾಳಿಕೆಯಲ್ಲಿ ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸುವ ಆಶಾಭಾವನೆ ಇದೆ. ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದ್ದು, ರಾಜ್ಯದ ಅಭಿವೃದ್ಧಿಯೆಡೆಗೆ ಗಮನ ಹರಿಸಲಿ' ಎಂದು ಆಶಿಸಿದರು.

ಗುಜರಾತ್ ಮಾದರಿ ಚುನಾವಣೆ ಎಂದು ನಾವ್ಯಾರೂ ಹೇಳಿಲ್ಲ. ಕೆಲವು ಮಾಧ್ಯಮಗಳು ಹಾಗೂ ವಿರೋಧಿಗಳು ಹಾಗೆ ಹೇಳಿವೆ. ಪಕ್ಷದಲ್ಲಿ ಹಿರಿಯರನ್ನು ಹಾಗೂ ಲಿಂಗಾಯತರನ್ನು ಕಡೆಗಣಿಸಿದ್ದಾರೆ ಎನ್ನುವ ಆರೋಪದಲ್ಲಿಯೂ ಹುರುಳಿಲ್ಲ. ಹಿರಿಯರಿಗೂ, ಲಿಂಗಾಯತ ನಾಯಕರಿಗೂ ಟಿಕೆಟ್ ನೀಡಿದ್ದೇವೆ. ಪಕ್ಷದಲ್ಲಿ ಉತ್ತಮ ಸ್ಥಾನ ಮಾನ ನೀಡಿ ಗೌರವವನ್ನೂ ನೀಡಿದ್ದೇವೆ' ಎಂದು ಹೇಳಿದರು.

ಧಾನಸಭಾ ಚುನಾವಣಾ ಫಲಿತಾಂಶ ಲೋಕಸಭಾ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ರಾಜ್ಯದಲ್ಲಿ 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.

ಒಂದೇ ವರ್ಷದಲ್ಲಿ ಲೋಕಸಭಾ ಚುನಾವಣೆ ಎದುರಾಗಿ, ನಾವು 26 ಸ್ಥಾನಗಳಲ್ಲಿ ಜಯ ಗಳಿಸಿದ್ದೇವೆ. ನಂತರ ನಡೆದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಗೆಲುವು ಸಾಧಿಸಿದ್ದೇವೆ' ಎಂದರು.

ಪ್ರಧಾನಿ ನರೇಂದ್ರ ಮೋದಿ ಚುನಾವಣಾ ಪ್ರಚಾರ ಮಾಡಿದಲ್ಲೆಲ್ಲ ಬಿಜೆಪಿ ಸೋಲು ಕಂಡಿದೆಯಲ್ಲ' ಎನ್ನುವ ಮಾಧ್ಯಮದವರ ಪ್ರಶ್ನೆಗೆ, 'ಮೋದಿ ಎಲ್ಲ ಕಡೆಯೂ ಪ್ರಚಾರ ಮಾಡಿದ್ದಾರೆ.

ಕೆಲವು ಕಡೆ ಸೋಲಾಗಿದೆ. ಸೋಲಿಗೆ ಕಾರಣವೇನು ಎನ್ನುವ ಕುರಿತು ಪಕ್ಷದ ಕೋರ್ ಕಮಿಟಿಯಲ್ಲಿ ಚರ್ಚಿಸುತ್ತೇವೆ' ಎಂದು ಉತ್ತರಿಸಿದರು.

ಸೆಂಟ್ರಲ್ ಕ್ಷೇತ್ರದಲ್ಲಿ ಜಗದೀಶ ಶೆಟ್ಟರ್ ಸೋತಿದ್ದಾರೆ ಎನ್ನುವುದಕ್ಕಿಂತ, ಬಿಜೆಪಿ ಗೆದ್ದಿದೆ. ಬಿಜೆಪಿಯ ಭದ್ರಕೋಟೆ ಅದು ಎನ್ನುವುದು ಫಲಿತಾಂಶದಲ್ಲಿ ಸಾಬೀತಾಗಿದೆ' ಎಂದು ಅಭಿಪ್ರಾಯಪಟ್ಟರು.

# ಆರೋಗ್ಯಕರ ಜೀವನಕ್ಕಾಗಿ ಈ ಆಹಾರ ಕ್ರಮ ಅನುಸರಿಸಿ, ನಟಿ ಪ್ರಣಿತಾ ನೀಡಿದ ಸಲಹೆ ಇಲ್ಲಿದೆ

ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ನಿಮ್ಮ ಆಹಾರಕ್ರಮದಲ್ಲಿ ನೀವು ಸೇರಿಸಬೇಕಾದ ಮೂರು ಆಹಾರಗಳ ಕುರಿತ ಮಾಹಿತಿಯನ್ನು ದಕ್ಷಿಣ ಭಾರತದ ಖ್ಯಾತ ನಟಿ ಪ್ರಣಿತಾ ಸುಭಾಷ್ ಹಂಚಿಕೊಂಡಿದ್ದಾರೆ.

ನಾವು ಆರೋಗ್ಯಕರವಾಗಿ ಮತ್ತು ಸಧೃಡವಾಗಿರಲು, ನಮ್ಮ ಆಹಾರಕ್ರಮದಲ್ಲಿ ವಿವಿಧ ರೀತಿ ತಾಜಾ ಹಾಗೂ ಪೋಷಕಾಂಶಯುಕ್ತ ಆಹಾರಗಳನ್ನು ಸೇರಿಸಬೇಕು. ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ನಿಮ್ಮ ಆಹಾರಕ್ರಮದಲ್ಲಿ ನೀವು ಸೇರಿಸಬೇಕಾದ ಮೂರು ಆಹಾರಗಳ ಕುರಿತ ಮಾಹಿತಿಯನ್ನು ದಕ್ಷಿಣ ಭಾರತದ ಖ್ಯಾತ ನಟಿ ಪ್ರಣಿತಾ ಸುಭಾಷ್ (ಕಡಿಚಿಟು–ಣುಚಿ ಖಣಾಭುಭು) ಹಂಚಿಕೊಂಡಿದ್ದಾರೆ. ಆರೋಗ್ಯಕರ ಆಹಾರ ಪದ್ಧತಿ ಮತ್ತು ಪೌಷ್ಟಿಕ ಆಹಾರದ ಆಯ್ಕೆಗಳನ್ನು ನಿಮ್ಮ ಆಹಾರ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವುದರಿಂದ ನಿಮ್ಮ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ಅದು ಸಹಾಯಕವಾಗುತ್ತದೆ. ಈ ಆರೋಗ್ಯಕರ ಆಹಾರಗಳು ನಮ್ಮ ದೇಹದ ತೂಕವನ್ನು ಸರಿಯಾದ ರೀತಿಯಲ್ಲಿ ನಿಯಂತ್ರಣದಲ್ಲಿಟ್ಟುಕೊಳ್ಳಲು ಕೂಡಾ ಸಹಾಯಕವಾಗುತ್ತದೆ.



ನಮ್ಮನ್ನು ಆರೋಗ್ಯಕರವಾಗಿ ಮತ್ತು ಸದೃಢವಾಗಿಡಲು, ನಾವು ನಮ್ಮ ಆಹಾರಕ್ರಮದಲ್ಲಿ ವಿವಿಧ ರೀತಿಯಲ್ಲಿ ತಾಜಾ ಮತ್ತು ಪೋಷಕಾಂಶಯುಕ್ತ ಆಹಾರಗಳನ್ನು ಸೇರಿಸಿಕೊಳ್ಳಬೇಕು. ಇದೇ ರೀತಿಯ ಕೆಲವೊಂದು ಆರೋಗ್ಯಕರ ಆಹಾರ ಕ್ರಮಗಳ ಬಗ್ಗೆ ದಕ್ಷಿಣ ಭಾರತದ ಖ್ಯಾತ ನಟಿ ಪ್ರಣಿತಾ ಸುಭಾಷ್ ಅವರು ಹಂಚಿಕೊಂಡಿದ್ದಾರೆ.

ಬಾದಾಮಿ ಸೇವನೆಯ ಅಭ್ಯಾಸ ಮಾಡಿಕೊಳ್ಳಿ: ಬಾದಾಮಿ ಶಕ್ತಿಯುತವಾದ ಮತ್ತು ಪೋಷಕಾಂಶಗಳಿಂದ ತುಂಬಿದ ರುಚಿಕರವಾದ, ಆರೋಗ್ಯಕರವಾದ ಆಹಾರ ಆಯ್ಕೆಯಾಗಿದೆ. ಪ್ರಣಿತಾ ಸುಭಾಷ್ ಹೇಳುತ್ತಾರೆ, ನಾನು ಪ್ರತಿದಿನ ಬೆಳಗ್ಗೆ ಒಂದು ಹಿಡಿ ಬಾದಾಮಿಗಳನ್ನು ಸೇವಿಸುತ್ತೇನೆ. ಏಕೆಂದರೆ ಅವುಗಳು ತೃಪ್ತಿಕರವಾಗಿರುತ್ತವೆ ಮತ್ತು ಇದು ವರ್ಕೌಟ್ ಮಾಡುವ ಮುಂಚೆ ಮತ್ತು ನಂತರದ ಪರಿಪೂರ್ಣ ಆಹಾರವಾಗಿದೆ.

ಬಾದಾಮಿಯನ್ನು ಪ್ರತಿದಿನ ಸೇವಿಸುವುದರಿಂದ ಅದು ನಮ್ಮ ದೇಹಕ್ಕೆ ಶಕ್ತಿಯನ್ನು ಒದಗಿಸುತ್ತದೆ ಮತ್ತು ಅದು ನಮ್ಮನ್ನು ದಿನವಿಡೀ ಸಕ್ರೀಯವಾಗಿರಲು ಸಹಾಯ ಮಾಡುತ್ತದೆ. ಬಾದಾಮಿ ಪ್ರೋಟೀನ್‌ಗಳ ಸಮೃದ್ಧ ಮೂಲವಾಗಿರುವುದರಿಂದ ಇದು ನಮ್ಮ ದೇಹಕ್ಕೆ ಶಕ್ತಿ ಇಳುವರಿ ಮಾತ್ರವಲ್ಲದೆ ಸ್ನಾಯುವಿನ ದ್ರವ್ಯರಾಶಿಯ ಬೆಳವಣಿಗೆ ಮತ್ತು ನಿರ್ವಹಣೆಯನ್ನು ಸರಾಗವಾಗಿಸುತ್ತದೆ. ಪ್ರತಿದಿನ ಬೆಳಗ್ಗೆ ಬೆರಳೆಣಿಕೆಯಷ್ಟು ಬಾದಾಮಿಯನ್ನು ತಿನ್ನುವ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ಪಾಲಿಸಬಹುದು.

ಹೆಚ್ಚು ಹಸಿರು ಸೊಪ್ಪು ತರಕಾರಿಗಳ ಸೇವನೆ ಮಾಡಿ: ಹಸಿರು ಸೊಪ್ಪು, ತರಕಾರಿಗಳು ಹೇರಳವಾದ ಫೈಬರ್, ಜೀವಸತ್ವಗಳು, ಖನಿಜಗಳ ಮೂಲವಾಗಿದೆ. ಇವುಗಳ ಸೇವನೆಯಿಂದ ನಿಮ್ಮ ದೇಹವನ್ನು ವಿವಿಧ ರೋಗಗಳಿಂದ ರಕ್ಷಣೆ ಮಾಡಬಹುದು ಮತ್ತು ಗುಣಮಟ್ಟದ ಜೀವನವನ್ನು ನಡೆಸಬಹುದು. ಹಸಿರು ತರಕಾರಿಗಳು ಕಡಿಮೆ ಕ್ಯಾಲೋರಿಗಳನ್ನು ಹೊಂದಿರುತ್ತವೆ ಮತ್ತು ಹೆಚ್ಚುವರಿ ತೂಕವನ್ನು ಹೆಚ್ಚಿಸದ ಕಾರಣ ನೀವು ನಿಮ್ಮ ಆಯ್ಕೆಯ ಅನುಸಾರವಾಗಿ ಎಷ್ಟು ಪ್ರಮಾಣದಲ್ಲಿ ಬೇಕಾದರೂ ಈ ಹಸಿರು ತರಕಾರಿಗಳನ್ನು ಸೇವಿಸಬಹುದು.

ಕಡಿಮೆ ಸಕ್ಕರೆ ಅಂಶವಿರುವ ಇರುವ ಆಹಾರಗಳನ್ನು ಸೇವಿಸಿ: ಸಕ್ಕರೆಯ ಆಹಾರವು ಟೈಪ್ 2 ಮಧುಮೇಹ ಮತ್ತು ಹೃದ್ರೋಗಗಳಂತಹ ಕಾಯಿಲೆಗಳನ್ನು ಉಂಟುಮಾಡುತ್ತದೆ. ಹಾಗಾಗಿ ನಿಮ್ಮ ದೀರ್ಘಾವಧಿಯ ಆರೋಗ್ಯಕ್ಕಾಗಿ ಸಕ್ಕರೆ ಆಹಾರಗಳು ಮತ್ತು ಪಾನೀಯಗಳನ್ನು ಮಿತಿಗೊಳಿಸುವುದು ಮುಖ್ಯವಾಗಿದೆ. ಮೊಸರು, ಸ್ಮೂಥಿಗಳು, ಹಣ್ಣುಗಳು ಮತ್ತು ತರಕಾರಿಗಳಂತಹ ಕಡಿಮೆ ಸಕ್ಕರೆಯನ್ನು ಹೊಂದಿರುವ ಆಹಾರವನ್ನು ಸೇವಿಸಿ. ಇದು ನಿಮ್ಮ ತೂಕವನ್ನು ನಿರ್ವಹಿಸಲು ಮತ್ತು ಒಟ್ಟಾರೆ ದೇಹದ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

# ಕೋವಿಡ್ 19 ರ ಮೂಲದ ಮಾಹಿತಿ: ಮಸೂದೆ ಅಂಗೀಕಾರ

ವಾಷಿಂಗ್ಟನ್: ರಿಪಬ್ಲಿಕನ್ ಪಕ್ಷದ ಪ್ರಾಬಲ್ಯ ಹೊಂದಿರುವ ಯುಎಸ್ ಕಾಂಗ್ರೆಸ್, ಕೋವಿಡ್ 19 ರ ಮೂಲದ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸಲು ರಾಷ್ಟ್ರೀಯ ಗುಪ್ತಚರ ನಿರ್ದೇಶಕರಿಗೆ ಅನುವು ಮಾಡುವಂತೆ ಕೇಳುವ ಮಸೂದೆಯನ್ನು ಅಂಗೀಕರಿಸಿದೆ. ಅಲ್ಲದೆ ಬಿಲ್ ಅನುಮೋದನೆಗೆ ಅಧ್ಯಕ್ಷ ಜೋ ಬಿಡನ್ ಅವರಿಗೆ ಕಳುಹಿಸಲಾಗಿದೆ.

ಚೀನಾದ ಹುಬೈ ಪ್ರಾಂತ್ಯದ ವುಹಾನ್ ಲ್ಯಾಬ್‌ನಿಂದ ಸೋರಿಕೆ ಅಥವಾ ಆಕಸ್ಮಿಕವಾಗಿ ಬಿಡುಗಡೆಯಾದ ವೈರಸ್ ಪ್ರಪಂಚದಾದ್ಯಂತ 5 ಮಿಲಿಯನ್ ಜನರನ್ನು ಕೊಂದಿತು. ಲ್ಯಾಬ್‌ನ ಮಹಿಳಾ ತಂತ್ರಜ್ಞರೊಬ್ಬರು ವೈರಸ್ ಲ್ಯಾಬ್‌ನಿಂದ ಸೋರಿಕೆಯಾಗಿದೆ ಎಂದು ಹೇಳಿದ್ದರು. ನಂಗತರ ಆಕೆ ಕಣ್ಮರೆ ಆದ ಘಟನೆ ನಡೆದಿತ್ತು. ಬಳಿಕ ವಿಶ್ವಸಂಸ್ಥೆ ಆರೋಗ್ಯ ವಿಭಾಗ ವೈರಸ್ ಲ್ಯಾಬ್‌ನಿಂದ ಸೋರಿಕೆಯಾಗಿದೆ ಎಂದು ಒಪ್ಪಿಕೊಂಡಿತ್ತು.




ಯುಎಸ್ ಮಾಧ್ಯಮದ ತನಿಖೆಗಳು ವುಹಾನ್ ಲ್ಯಾಬ್‌ಗೆ ಯುಎಸ್ ಸರ್ಕಾರದಿಂದ ಜೆನೆಟಿಕ್ ಎಂಜಿನಿಯರಿಂಗ್ ಪ್ರಯೋಗಗಳಿಗೆ ಹಣವನ್ನು ನೀಡಲಾಗಿತ್ತು ಎಂದು ಬಹಿರಂಗವಾಗಿತ್ತು.

# ಅಕಾಲಿಕ ಮರಣದ ಅಪಾಯವನ್ನು ಹೆಚ್ಚಿಸಲಿವೆ ಎರಡು ಆಹಾರ ಪದಾರ್ಥ!

ದೇಹದಲ್ಲಿ ಸೋಡಿಯಂ ಅಂಶ ಹೆಚ್ಚಾದರೆ ಅದು ದೀರ್ಘಕಾಲದ ಕಾಯಿಲೆ ಮಟ್ಟವನ್ನು ಹೆಚ್ಚಿಸುತ್ತದೆ ಜತೆಗೆ ಅಕಾಲಿಕ ಮರಣದ ಅಪಾಯವನ್ನು ಉಂಟುಮಾಡುತ್ತದೆ ಎಂದು ವಿಶ್ವ ಆರೋಗ್ಯ ಸಂಘಟನೆ ವರದಿಯಲ್ಲಿ ಉಲ್ಲೇಖವಾಗಿದೆ.

ಚಿಪ್ಸ್ ಹಾಗೂ ನೂಡಲ್ಸ್‌ನಂಥ ಸಂಸ್ಕರಿಸಿದ ಆಹಾರ ಸೇವನೆಯಿಂದ ನಾನಾ ಸಮಸ್ಯೆಗಳು ಎದುರಾಗಲಿವೆ. ಹೆಚ್ಚು ಉಪ್ಪು ತಿನ್ನುವವರಲ್ಲಿ ಹೃದಯದ ಕಾಯಿಲೆ, ಪಾರ್ಶ್ವವಾಯು ಹಾಗೂ ಅಕಾಲಿಕ ಮರಣದ ಅಪಾಯ ಹೆಚ್ಚಾಗುತ್ತದೆ.



2025 ರವೇಳೆಗೆ ಪ್ರಪಂಚವು ಸೋಡಿಯಂ ಸೇವನೆಯನ್ನು ಶೇ.30ರಷ್ಟು ಕಡಿಮೆ ಮಾಡುವ ಜಾಗತಿಕ ಗುರಿಯನ್ನು ಸಾಧಿಸಲು ಹೊರಗುಳಿದಿದೆ. ದೇಹದಲ್ಲಿ ನೀರು ಮತ್ತು ಖನಿಜಗಳ ಸಮತೋಲನ ಕಾಪಾಡಿಕೊಳ್ಳಲು ಸೋಡಿಯಂ ಬೇಕಿದೆ.

ಆದರೆ ಅದೇ ಹೆಚ್ಚಾದರೆ ಜೀವಕ್ಕೆ ಕುತ್ತು ಖಂಡಿತ. ಉಪ್ಪು, ಫಾಸ್ಟ್‌ಫುಡ್, ಚಿಪ್ಸ್, ಸಂಸ್ಕರಿಸಿದ ತಿಂಡಿಗಳು, ಸೂಪ್, ಸಂಸ್ಕರಿಸಿದ ಮಾಂಸದ ತಿನಿಸು, ಇನ್ಸಟೆಂಟ್ ನೂಡಲ್ಸ್‌ನಲ್ಲಿ ಸೋಡಿಯಂ ಗ್ಲುಟಮೇಟ್ ಇರುತ್ತದೆ. ಈ ಪದಾರ್ಥಗಳ ಸೇವನೆ ನಿಲ್ಲಿಸಬೇಕು ಎಂದಿದೆ.

# ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಕರಿಬೇವು ತಿಂದ್ರೆ ಕೆಲವು ಕಾಯಿಲೆ ಬರುವುದಿಲ್ಲ

ಕರಿಬೇವಿನ ಎಲೆಗಳನ್ನು ಭಾರತೀಯ ಪಾಕಪದ್ಧತಿಯಲ್ಲಿ ಸುವಾಸನೆಗಾಗಿ ಬಳಸಲಾಗುತ್ತದೆ. ಈ ಕರಿಬೇವಿನ ಎಲೆಗಳನ್ನು ಹೆಚ್ಚಾಗಿ ದಕ್ಷಿಣ ಭಾರತದ ಅಡುಗೆಗಳಲ್ಲಿ ಬಳಸಲಾಗುತ್ತದೆ. ಆದರೆ ಕರಿಬೇವಿನ ಎಲೆಗಳು ಅನೇಕ ಆರೋಗ್ಯ ಪ್ರಯೋಜನಗಳನ್ನು ಹೊಂದಿವೆ.

ಇದು ರಂಜಕ, ಕ್ಯಾಲ್ಸಿಯಂ, ಕಬ್ಬಿಣ, ತಾಮ್ರ, ಜೀವಸತ್ವಗಳು ಮತ್ತು ಮೆಗ್ನೀಸಿಯಮ್‌ನಂತಹ ಪೋಷಕಾಂಶಗಳಲ್ಲಿ ಸಮೃದ್ಧವಾಗಿದೆ. ಇದನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಅನೇಕ ರೋಗಗಳು ನಿವಾರಣೆಯಾಗುತ್ತವೆ. ಕರಿಬೇವಿನ ಎಲೆಗಳನ್ನು ತಿನ್ನುವುದರಿಂದ ಆಗುವ ಅದ್ಭುತ ಪ್ರಯೋಜನಗಳನ್ನು ತಿಳಿದುಕೊಳ್ಳೋಣ.



**ಕರಿಬೇವಿನ ಎಲೆಗಳ ಪ್ರಯೋಜನಗಳು:** 1. ಕಣ್ಣುಗಳಿಗೆ ಒಳ್ಳೆಯದು: ಕರಿಬೇವಿನ ಎಲೆಯಲ್ಲಿ ವಿಟಮಿನ್ ಎ ಹೇರಳವಾಗಿದೆ. ಇದು ದೃಷ್ಟಿ ಸುಧಾರಿಸಲು ಸಹಾಯ ಮಾಡುತ್ತದೆ. ಇದು ಕುರುಡುತನದ ಅಪಾಯವನ್ನು ಸಹ ತಡೆಯುತ್ತದೆ.

2. ಮಧುಮೇಹ ನಿಯಂತ್ರಣ: ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುವ ಅದರ ಹೈಪೊಗ್ಲಿಸಿಮಿಕ್ ಗುಣಲಕ್ಷಣಗಳಿಂದಾಗಿ, ಕರಿಬೇವಿನ ಎಲೆಗಳನ್ನು ಮಧುಮೇಹ ರೋಗಿಗಳು ಆಗಾಗ್ಗೆ ಅಗಿಯಲು ಶಿಫಾರಸು ಮಾಡಲಾಗುತ್ತದೆ.

3. ಜೀರ್ಣಕ್ರಿಯೆ ಸುಧಾರಣೆ: ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಕರಿಬೇವಿನ ಎಲೆಗಳನ್ನು ಜಗಿಯುವುದರಿಂದ ನಿಮ್ಮ ಜೀರ್ಣಕ್ರಿಯೆಯು ಉತ್ತಮಗೊಳ್ಳುತ್ತದೆ. ಇದು ಮಲಬದ್ಧತೆ, ಅಸಿಡಿಟಿ, ಉಬ್ಬುವುದು ಮುಂತಾದ ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳನ್ನೂ ದೂರ ಮಾಡುತ್ತದೆ.

4. ಸೋಂಕಿನ ವಿರುದ್ಧ ರಕ್ಷಣೆ: ಕರಿಬೇವಿನ ಎಲೆಗಳು ಆಂಟಿಫಂಗಲ್ ಮತ್ತು ಆಯಂಟಿಬಯೋಟಿಕ್ ಗುಣಗಳನ್ನು ಹೊಂದಿವೆ. ಇದು ಅನೇಕ ರೀತಿಯ ಸೋಂಕುಗಳನ್ನು ತಡೆಯುತ್ತದೆ.

5. ತೂಕವನ್ನು ಕಡಿಮೆ ಮಾಡುತ್ತದೆ: ಕರಿಬೇವಿನ ಎಲೆಗಳನ್ನು ಜಗಿಯುವುದರಿಂದ ತೂಕ ಮತ್ತು ಹೊಟ್ಟೆಯ ಕೊಬ್ಬನ್ನು ಕಡಿಮೆ ಮಾಡಬಹುದು ಏಕೆಂದರೆ ಇದು ಹೆಚ್ಚಿನ ಪ್ರಮಾಣದ ಪೋಷಕಾಂಶಗಳಾದ ಈಥೈಲ್ ಅಸಿಟೇಟ್, ಮಹಾನಿಂಬಿನ್ ಮತ್ತು ಡೈಕ್ಲೋರೋಮೆಥೇನ್ ಅನ್ನು ಹೊಂದಿರುತ್ತದೆ.

ಗಮನಿಸಿ: ಇಲ್ಲಿ ನೀಡಲಾದ ಮಾಹಿತಿಯು ಮನೆಮದ್ದುಗಳು ಮತು ಸಾಮಾನ್ಯ ಮಾಹಿತಿಯನ್ನು ಆಧರಿಸಿದೆ. ಅದನ್ನು ಅಳವಡಿಸಿಕೊಳ್ಳುವ ಮೊದಲು ವೈದ್ಯಕೀಯ ಸಲಹೆಯನ್ನು ತೆಗೆದುಕೊಳ್ಳಬೇಕು.

# ಅಚ್ಚರಿಯ ಫಲಿತಾಂಶ

## ಮೂರೂ ಪಕ್ಷಗಳಿಗೆ ಪಾಠ ಕಲಿಸಿದ ಮತದಾರ ಪ್ರಭು



ಎಚ್. ಮಾರುತಿ

ಕರ್ನಾಟಕ ರಾಜ್ಯ ವಿಧಾನಸಭೆ ಫಲಿತಾಂಶ ಹೊರಬಿದ್ದಿದ್ದು, ಅತಂತ್ರ ವಿಧಾನಸಭೆಗೆ ಅವಕಾಶ ನೀಡದೆ ಐದು ವರ್ಷಗಳ ಆಡಳಿತ ನಡೆಸಲು ಕಾಂಗ್ರೆಸ್‌ಗೆ ಅವಕಾಶ ನೀಡಿರುವುದು ಈ ಬಾರಿಯ ವಿಶೇಷ. ಅಷ್ಟರ ಮಟ್ಟಿಗೆ ರಾಜ್ಯದ ಮತದಾರರರು ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಂಡಿರುವುದನ್ನು ಮೆಚ್ಚಲೇಬೇಕು. ರಾಜ್ಯದಲ್ಲಿ ಕಳೆದ 38 ವರ್ಷಗಳಿಂದ ಅಂದರೆ=1985ರಿಂದ ಆಡಳಿತಾರೂಢ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದ ಉದಾಹರಣೆ ಇಲ್ಲವೇ ಇಲ್ಲ.

ಈ ಬಾರಿಯೂ ಅದೇ ಸಂಪ್ರದಾಯ ಮುಂದುವರೆದಿದೆ. ಸರಕಾರ ಸ್ಥಿರ. ಆದರೆ ಪಕ್ಷ ಮಾತ್ರ ಪ್ರತಿ ಚುನಾವಣೆಗೊಮ್ಮೆ ಬದಲಾಗುತ್ತಲೇ ಇರುತ್ತದೆ. ಈ ಬಾರಿಯ ಫಲಿತಾಂಶ ನಿಜಕ್ಕೂ ಅಚ್ಚರಿ ಮೂಡಿಸಿದೆ. ಅದರಲ್ಲೂ ಆಡಳಿತಾರೂಢ ಬಿಜೆಪಿಗೆ ದೊಡ್ಡ ಮಟ್ಟದಲ್ಲೇ ಶಾಕ್ ನೀಡಿದೆ. ಬಿಜೆಪಿ ಸೋಲನ್ನು ನಿರೀಕ್ಷೆ ಮಾಡಿತ್ತು. ಆದರೆ ಈ ಪರಿಯ ಸೋಲನ್ನು ಅಲ್ಲ, ಹೆಚ್ಚೆಂದರೆ 20–25 ಸ್ಥಾನಗಳು ಕಡಿಮೆಯಾಗಲಿದ್ದು, ಜೆಡಿಎಸ್ ಸಹಕಾರದೊಂದಿಗೆ ಸರಕಾರ ಮುಂದುವರೆಸುವ ಇರಾದೆಯಲ್ಲಿತ್ತು. ಈ ಸಂಬಂಧ ಬಿಜೆಪಿ ವರಿಷ್ಠರು ತೆನೆ ಹೊತ್ತ ಮಹಿಳೆಯ ಯಜಮಾನರೊಂದಿಗೆ ಮಾತುಕತೆಯನ್ನೂ ನಡೆಸಿದ್ದರು.

ಪ್ರತಿ ಚುನಾವಣೆಯಲ್ಲೂ ಎಲ್ಲ ಪಕ್ಷಗಳಿಗೆ ಕಲಿಯಬೇಕಾದ ಪಾಠ ಇದ್ದೇ ಇರುತ್ತದೆ. ಗೆದ್ದ ಪಕ್ಷ ಬೀಗಬೇಕಿಲ್ಲ, ಹಾಗೆಯೇ ಸೋತ ಪಕ್ಷ ಕುಸಿಯಬೇಕಿಲ್ಲ. ಮುಂದಿನ ಚುನಾವಣೆಗೆ ಸನ್ನದ್ದವಾಗುವ ಅವಕಾಶ ಇದ್ದೇ ಇರುತ್ತದೆ. ಪ್ರಜಾಪ್ರಭುತ್ವದ ದೇಶದಲ್ಲಿ ಚುನಾವಣೆಗಳಿಗೆ ಬರವಿರುವುದಿಲ್ಲ. ಮುಂದೆ ಲೋಕಸಭಾ ಚುನಾವಣೆ, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳು ಎದುರಾಗುತ್ತವೆ. ಅಲ್ಲಿ ಸಾಮರ್ಥ್ಯ ಪ್ರದರ್ಶನ ಮಾಡುವ ಅವಕಾಶ ಇದ್ದೇ ಇರುತ್ತದೆ. ಸೋಲು ಅನಾಥ, ಗೆಲುವಿಗೆ ಹಲವು ಪೋಷಕರು ಎಂಬ ನಾಣ್ನುಡಿ ಇದೆ. ಬಿಜೆಪಿಯ ಸೋಲಿಗೆ ಕಾರಣ ಯಾರು ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರ ಇಲ್ಲ. ಇದ್ದರೂ ಬಹಿರಂಗವಾಗಿ ಹೇಳಲು ಧೈರ್ಯ ಸಾಲದು. ಆದರೆ ಗೆದ್ದಿದ್ದರೆ ಗೆಲುವಿನ ಸಂಪೂರ್ಣ ಗೌರವವನ್ನು ಪ್ರಧಾನಿ ಮೋದಿ ಮತ್ತು ಸಚಿವ ಅಮಿತ್ ಶಾ ಅವರಿಗೆ ಸಲ್ಲಿಸುತ್ತಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ.

**ಬಿಜೆಪಿಯ ಪತನ ಆರಂಭವಾಗಿದ್ದು ಎಲ್ಲಿಂದ?**

ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಪಟ್ಟದಿಂದ ಇಳಿಸಿದಾಗಲೇ ಬಿಜೆಪಿ ಸೋಲಿಗೆ ಮುನ್ನುಡಿ ಬರೆಯಲಾಗಿತ್ತು. ಅಂದಿನಿಂದಲೇ ಬಿಜೆಪಿ ಕುಸಿಯುತ್ತಾ ಬಂದಿತ್ತು. ಈ ಹಿಂದೆಯೇ ಹೇಳಿದಂತೆ ಯಡಿಯೂರಪ್ಪ ಅವರೇ 113 ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ ಎಂದ ಮೇಲೆ ಇನ್ನಾರಿಗೆ ಸಾಧ್ಯವಾದೀತು ಎನ್ನುವುದು ವರಿಷ್ಠರಿಗೆ ಅರ್ಥವಾಗದಿದ್ದರ ಪರಿಣಾಮ ಈ ಸೋಲು. ರಾಜ್ಯದ ಜನಸಂಖ್ಯೆಯಲ್ಲಿ ಶೇ.17ರಷ್ಟಿರುವ ವೀರಶೈವ ಲಿಂಗಾಯತರು ದಿನದಿಂದ ದಿನಕ್ಕೆ ಬಿಜೆಪಿಯಿಂದ ದೂರ ಸರಿಯಲಾರಂಬಿಸಿದ್ದರು. ಈ ಮೂಲಕ ತನ್ನ ಬೆಂಬಲಕ್ಕಿದ್ದ ಒಂದು ದೊಡ್ಡ ಸಮುದಾಯವನ್ನು ಬಿಜೆಪಿ ಕಳೆದುಕೊಂಡಿತ್ತು. ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರಿಗೆ ಟಿಕೆಟ್ ನಿರಾಕರಿಸಿದ್ದು ಕೂಡಾ ಲಿಂಗಾಯತರ ಸಿಟ್ಟಿಗೆ ಕಾರಣವಾಗಿತು. ಅವಕಾಶಗಳಿದ್ದರೂ ಬೊಮ್ಮಾಯಿ ಈ ಸಮುದಾಯದ ನಾಯಕನಾಗುವ ಯಾವುದೇ ಪ್ರಯತ್ನ ಮಾಡಿಲ್ಲಿಲ್ಲ.

**ಭಾಷಣದ ಸರಕಾದ ಡಬಲ್ ಇಂಜಿನ್ ಸರಕಾರ**

ಈ ಬಾರಿಯ ಸರಕಾರ ಡಬಲ್ ಇಂಜಿನ್ ಸರಕಾರ ಎಂದು ಪ್ರಧಾನಿ ಮೋದಿ ಅವರಿಂದ ಕನ್ನಡದಲ್ಲಿ ಹೇಳಿಸಲಾಗಿತ್ತು. ಆದರೆ ಡಬಲ್ ಸರಕಾರಗಳಿಂದ ಆದ ಪ್ರಯೋಜನಗಳೇನು ಎನ್ನವುದು ಎಲ್ಲಿಯೂ ಕಂಡುಬರಲೇ ಇಲ್ಲ. ಬೆಲೆ ಏರಿಕೆ, ಶೇ.40ಕಮೀಷನ್ ಇಂತಹ ಆರೋಪಗಳೇ ವಿಜೃಂಭಿಸಿದವು. ಉತ್ತರ ಪ್ರದೇಶದಲ್ಲಿ ಎರಡನೇ ಬಾರಿಗೆ ಸರಕಾರ ಆಯ್ಕೆಯಾದ ಇತಿಹಾಸವೇ ಇರಲಿಲ್ಲ. ಆದರೆ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸರಕಾರ ಎರಡನೇ ಬಾರಿಗೆ ಆಡಳಿತದ ಚುಕ್ಕಾಣಿ ಹಿಡಿಯುವಲ್ಲಿ ಸಫಲವಾಗಿತ್ತು. ರಾಜ್ಯ ಮತ್ತು ಕೇಂದ್ರ ಸರಕಾರದ ಯೋಜನೆಗಳು ಕಣ್ಣಿಗೆ ಕಾಣಿಸುತಿದ್ದವು ಮತ್ತು ರಾಜ್ಯದ ಜನತೆಯನ್ನು ತಲುಪಿದ್ದವು. ಹಾಗಾಗಿ ಅಲ್ಲಿ ಯೋಗಿ ಮತ್ತೆ ಮುಖ್ಯಮಂತ್ರಿಯಾದರು.

ಆದರೆ ಕರ್ನಾಟಕದ ಪರಿಸ್ಥಿತಿ ವಿಭಿನ್ನವಾಗಿತ್ತು. ಇಲ್ಲಿ ರಾಜ್ಯ ಸರಕಾರವೂ ಹೇಳಿಕೊಳ್ಳುವಂತಹ ಯಾವುದೇ ಸಾಧನೆ ಮಾಡಿರಲಿಲ್ಲ. ಹಾಗೆಯೇ ಕೇಂದ್ರವೂ ರಾಜ್ಯದ ನೆರವಿಗೆ ಧಾವಿಸಿರಲಿಲ್ಲ. ಪ್ರಧಾನಿ ಮೋದಿ ನಾನು ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ ಎಂದು ಘೋಷಿಸಿದ್ದರು. ಯಡಿಯೂರಪ್ಪ ಅವರ ಅವಧಿಯಲ್ಲಿ ಗುತ್ತಿಗೆದಾರರ ಸಂಘ ರಾಜ್ಯ ಬಿಜೆಪಿ ಸರಕಾರದ ವಿರುದ್ಧ ಶೇ.40 ಕಮೀಷನ್ ಆರೋಪ ಕುರಿತು ಪತ್ರ ಬರೆಯಿತಾದರೂ ಮೋದಿ ಕಿವಿಗೊಡಲಿಲ್ಲ. ಈ ಪತ್ರ ದೇಶಾದ್ಯಂತ ಸದ್ದು ಮಾಡಿದಾಗಲೂ ಪ್ರತಿಕ್ರಿಯೆ ನೀಡುವ ಗೋಜಿಗೆ ಹೋಲಿಲ್ಲ. ಅದಕ್ಕೆ ಇಂದು ರಾಜ್ಯ ಘಟಕ ಬೆಲೆ ತೆತ್ತಂತಾಗಿದೆ. ಈ ಪತ್ರವನ್ನೇ ಅಸ್ತ್ರವನ್ನಾಗಿ ಇಟ್ಟುಕೊಂಡು ಕಾಂಗ್ರೆಸ್ ಪೇ ಸಿಎಂ ಅಭಿಯಾನ ನಡೆಸಿತು. ಇದು ತಕ್ಕಮಟ್ಟಿಗೆ ಜನಮಾನಸದ ಮನದಲ್ಲಿ ಉಳಿಯಿತು. ಹೌದಲ್ಲ! ಇದು ಕಮೀಷನ್ ಸರಕಾರ ಎಂದು ಶ್ರೀ ಸಾಮಾನ್ಯನೂ ಮಾತನಾಡಲು ಆರಂಭಿಸಿದ. ಇದಕ್ಕೆ ಮುಖ್ಯಮಂತ್ರಿ ಪ್ರತಿಕ್ರಿಯೆ ಪೇಲವವಾಗಿತ್ತು.

ಬಿಜೆಪಿಯ ತಪ್ಪುಗಳ ಮೇಲೆ ತಪ್ಪು ಮಾಡುತ್ತಾ ಹೋಯಿತು. ಮೋದಿ–ಶಾ ಜೋಡಿ ರೋಡ್ ಶೋ ಮಾಡಿದರೆ ಅನಾಯಾಸವಾಗಿ ಮತಗಳು ಬುಟ್ಟಿಗೆ ಬೀಳುತ್ತವೆ ಎಂದು ಬಿಜೆಪಿ ನಾಯಕರು ಭಾವಿಸಿದ್ದರು. ಯಡಿಯೂರಪ್ಪ ಹೊರತುಪಡಿಸಿದರೆ ಮತ್ತೊಬ್ಬ ಲಿಂಗಾಯತ ಮುಖಂಡ ಪಕ್ಷದಲ್ಲಿ ಇರಲಿಲ್ಲ. ಅಷ್ಟೇ ಏಕೆ? ಎರಡನೇ ಹಂತದ ನಾಯಕರ ಕೊರತೆ ಎದುರಾಗಿತ್ತು. ಪರ್ಯಾಯವಾಗಿ ಕಾಂಗ್ರೆಸ್ ಸ್ಥಳೀಯವಾಗಿ ನಾಯಕರನ್ನು ಹುಟ್ಟು ಹಾಕುತ್ತಾ ಹೋಯಿತು. ಎಲ್ಲಿಯೂ ಗಾಂಧಿ ಕುಟುಂಬದ ಕುಡಿಗಳು ವಿಜೃಂಭಿಸಲಿಲ್ಲ. ಎಲ್ಲ ನಿರ್ಧಾರವನ್ನು ರಾಜ್ಯ ನಾಯಕರಿಗೆ ಬಿಟ್ಟು ಬಿಟ್ಟಿದ್ದರು. ಕೇವಲ ಮಾನಿಟರಿಂಗ್ ಮಾಡುತ್ತಾ ಹೋದರು. ಇದಕ್ಕೆ ಪರ್ಯಾಯವಾಗಿ ಬಿಜೆಪಿಯಲ್ಲಿ ಎಲ್ಲ ನಿರ್ಧಾರಗಳೂ ಕೇಂದ್ರೀಕೃತವಾಗಿದ್ದವು. ಟಿಕೆಟ್ ಹಂಚಿಕೆ, ಘೋಷಣೆ, ಪ್ರಚಾರದ ಹೊಣೆ ಎಲ್ಲವನ್ನೂ ಹೈಕಮಾಂಡ್ ತನ್ನ ಟೀಂನಿಂದ ನಿರ್ವಹಿಸುತ್ತಿತ್ತು.

ರಾಜ್ಯ ಬಿಜೆಪಿ ನಾಯಕರಿಗೆ ಕೆಲಸವೇ ಇರಲಿಲ್ಲ. ಚುನಾವಣೆಯಲ್ಲಿ ನಮಗೆ ಕೆಲಸವೇ ಇರಲಿಲ್ಲ ಎಂದು ಮುಖಂಡರೊಬ್ಬರು ಇತ್ತೀಚೆಗೆ ಹೇಳಿಕೊಂಡಿದ್ದರು. ನಂದಿನಿ ಅಮೂಲ್ ವಿವಾದವೂ ಕನ್ನಡಿಗರ ಆಕ್ರೋಶಕ್ಕೆ ತುಪ್ಪ ಸುರಿದಿತ್ತು. ನಂದಿನಿ ಮತ್ತು ಅಮೂಲ್ ವಿಲೀನ ಕುರಿತು ಅಮಿತ್ ಶಾ ಪ್ರಸ್ತಾಪಿಸುವ ಮೂಲಕ ಕನ್ನಡಿಗರ ಅದರಲ್ಲೂ ಹಳೇ ಮೈಸೂರು ಭಾಗದ ಜನತೆಯ ಸಿಟ್ಟಿಗೆ ಕಾರಣರಾದರು. ಸ್ಥಳೀಯವಾಗಿ ಬಹುತೇಕ ಜಿಲ್ಲೆಗಳಲ್ಲಿ ಅದರಲ್ಲೂ ರೈತಾಪಿ ಸಮುದಾಯ ಬಿಜೆಪಿ ವಿರುದ್ಧ ನಿಲ್ಲಲಾರಂಭಿಸಿತು. ಈ ವಿವಾದವನ್ನು ಕಾಂಗ್ರೆಸ್ ಸಮರ್ಥವಾಗಿ ಬಳಸಿಕೊಂಡಿತು. ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿಯ ಯಾವೊಬ್ಬ ನಾಯಕನೂ ಸ್ಥಳೀಯ ವಿಚಾರಗಳನ್ನು ಪ್ರಸ್ತಾಪಿಸಲೇ ಇಲ್ಲ. ರಾಜ್ಯ ಮುಖಂಡರು ಪ್ರತಿಯೊಂದು ಸಂಗತಿಗೂ ಹೈಕಮಾಂಡ್ ಮೊರೆ ಹೋದದ್ದೇ ಹೆಚ್ಚು. ಮೋದಿ ಶಾ ಜೋಡಿಯ ಮೇಲೆ ಅತಿಯಾದ ಅವಲಂಬನೆಯೂ ಸೋಲಿಗೆ ಕಾರಣವಾಯಿತು.

ಚುನಾವಣೆಗೂ ಮುನ್ನ ಬಿಜೆಪಿ ಹಲಾಲ್, ಜಟ್ಕಾ, ಹಿಜಾಬ್, ಪಾಕಿಸ್ತಾನ ಇಂತಹ ವಿಷಯಗಳನ್ನು ಪದೇ ಪದೇ ಪ್ರಸ್ತಾಪಿಸುತ್ತಾ ಕಾಂಗ್ರೆಸ್ ಪಕ್ಷವನ್ನು ಕೆಣಕುತ್ತಾ ಹೋಯಿತಾದರೂ ಕಾಂಗ್ರೆಸ್ ಯಾವುದೇ ಪ್ರತಿಕ್ರಿಯೆ ನೀಡದೆ ಮೌನ ವಹಿಸಿದ್ದು ವರದಾನವಾಯಿತು. ಒಂದು ವೇಳೆ ಕಾಂಗ್ರೆಸ್ ಪ್ರತಿಕ್ರಿಯೆ ನೀಡಿದ್ದರೆ ಫಲಿತಾಂಶ ಏರುಪೇರಾಗುವ ಸಂಭವವಿತ್ತು. ಆಗಿರುವ ತಪ್ಪುಗಳನ್ನು ತಿದ್ದಿಕೊಳ್ಳುವುದೊಂದೇ ಬಿಜೆಪಿಗಿರುವ ಏಕೈಕ ಮಾರ್ಗ. ಹಿಂದುತ್ವ, ಕೋಮುವಾದ, ಹಿಜಾಬ್, ಹಲಾಲ್‌ನಂತಹ ಕ್ಷುಲ್ಲಕ ವಿಷಯಗಳನ್ನ ಬದಿಗಿಟ್ಟು ಜನಪರ ವಿಷಯಗಳನ್ನು ಕೈಗೆತ್ತಿಕೊಂಡರೆ ಮರಳಿ ರಾಜ್ಯದ ಜನತೆಯ ವಿಶ್ವಾಸವನ್ನು ಗಳಿಸಲು ಸಾಧ್ಯತೆಗಳಿವೆ.

ತನ್ನ ಹಳೆಯ ವಿಷಯಗಳಿಗೆ ಜೋತು ಬಿದ್ದರೆ ಮುಂದಿನ ವರ್ಷ ಬರುವ ಲೋಕಸಭಾ ಚುನಾವಣೆಯಲ್ಲಿ ಎಡವಿ ಬೀಳುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

**ಗೆಲುವಿನಲ್ಲಿ ಕಾಂಗ್ರೆಸ್ ಕಲಿಯಬೇಕಾದ ಪಾಠ**

ಕಾಂಗ್ರೆಸ್ ಗೆಲುವಿಗೂ ಹತ್ತಾರು ಕಾರಣಗಳು ಸಿಗುತ್ತವೆ. ಆರೇಳೂ ತಿಂಗಳು ಮೊದಲೇ ಆಯೋಜಿಸಿದ್ದ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಬೂಸ್ಟರ್ ರೀತಿಯಲ್ಲಿ ಕೆಲಸ ಮಾಡಿದ್ದು ಸುಳ್ಳಲ್ಲ. ಅಂದಿನಿಮದಲೇ ಕಾಂಗ್ರೆಸ್ ಕಾರ್ಯಕರ್ತರು ಪುಟಿದೆದ್ದು ಪಕ್ಷದ ಪರವಾಗಿ ಸಮರ್ಥವಾಗಿ ಕೆಲಸ ಮಾಡಲು ಆರಂಭಿಸಿದ್ದರು. ಸಾಮೂಹಿಕ ನಾಯಕತ್ವ ಮತ್ತು ಅದನ್ನು ಬಹಿರಂಗವಾಗಿ ಪ್ರದರ್ಶನ ಮಾಡಿದ್ದು ಸಾಕಷ್ಟು ನೆರವಿಗೆ ಬಂದಿತು. ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ಸಿಎಂ ಪಟ್ಟಕ್ಕೆ ಏನೆಲ್ಲಾ ಪೈಪೋಟಿ ಇದ್ದರೂ ಬಹಿರಂಗಾಗಿ ತೋರಿಸಿಕೊಳ್ಳಲಿಲ್ಲ.

ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅವರ ಸಮಯೋಚಿತ ಆಯ್ಕೆ ಇಡೀ ರಾಜ್ಯಾದ್ಯಂತ ಸಹಾಯವಾಯಿತು. ವಿಶೇಷವಾಗಿ ಕಲಾಣ ಕರ್ನಾಟಕದಲ್ಲಿ ನೆರವಿಗೆ ಬಂದಿತು. ಸಾಮಾನ್ಯವಾಗಿ ಕಾಂಗ್ರೆಸ್ ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಯಾವಾಗಲೂ ಹಿಂದೆ ಇರುತ್ತದೆ.

ಆದರೆ ಈ ಬಾರಿ ಬಿಜೆಪಿಗಿಂತಲೂ ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಜೊತೆಗೆ ಚುನಾವಣೆ ಸಂದರ್ಭದಲ್ಲಿ ನೀಡಿದ ಜಾಹಿರಾತುಗಳು ಕೈ ಹಿಡಿದಿವೆ. ಬಿಜೆಪಿಯಂತೆ ಕೋಮುವಾದದ ವಿಷಯಗಳನ್ನು ಬದಿಗಿಟ್ಟು ಮಧ್ಯಮ ವರ್ಗ ಮತ್ತು ಬಡತನ ರೇಖೆಗಿಂತ ಕೆಳಗಿರುವವರನ್ನು ಕುರಿತು ಮಾತನಾಡಲು ಆರಂಭಿಸಿದ್ದು ಅವರನ್ನು ತಲುಪುವಲ್ಲಿ ಯಶಸ್ಸು ಕಂಡಿತು. ಅಧಿಕಾರ ಬಂದಿದ್ದೇನೆ ಎಂದು ಕಾಂಗ್ರೆಸ್ ಮೈಮರೆಯದೆ ಕೊಟ್ಟಿರುವ ಆಶ್ವಾಸನೆಗಳನ್ನು ಈಡೇರಿಸುವ ಮೂಲಕ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ಉಚಿತ ಕರೆಂಟ್, ಮಹಿಳೆಯರಿಗೆ 2000 ರೂ ಮಾಸಿಕ ಆದಾಯ, ನಿರುದ್ಯೋಗ ಭತ್ಯೆಯಂತಹ ಭರವಸೆಗಳನ್ನು ಕೂಡಲೇ ಜಾರಿಗೊಳಿಸಬೇಕು. ಅತಿಯಾಗಿ ಮುಸಲ್ಮಾನರ ಓಲೈಕೆ ಮಾಡುತ್ತದೆ ಎಂಬ ಅಪವಾದವನ್ನು ನಿವಾರಿಸಿಕೊಳ್ಳಬೇಕು. ಜನಪರ ವಿಷಯಗಳನ್ನು ಎತ್ತಿಕೊಂಡು ಹೋರಾಟ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಜನಸಾಮಾನ್ಯರ ಕಷ್ಟಸುಖಗಳನ್ನು ಮರೆಯಬಾರದು.

**ಜೆಡಿಎಸ್ ಬೇರುಮಟ್ಟದಿಂದ ರೂಪುಗೊಳ್ಳಲಿ**

ಪ್ರಾದೇಶಿಕ ಪಕ್ಷವಾಗಿ ರೂಪುಗೊಳ್ಳುವ ಎಲ್ಲ ಅವಕಾಶಗಳಿದ್ದರೂ ಬಳಸಿಕೊಳ್ಳದೆ ಕೈ ಚೆಲ್ಲಿದ್ದು ಜೆಡಿಎಸ್. ಇಡೀ ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪಾರುಪತ್ಯ. ತಮಿಳುನಾಡು, ಕೇರಳ, ತೆಲಂಗಾಣ ಆಂಧ್ರಪ್ರದೇಶದಲ್ಲಿ ರಾಷ್ಟ್ರೀಯ ಪಕ್ಷಗಳು ತಲೆ ಎತ್ತಲು ಹರಸಾಹಸ ಪಡುತ್ತಿವೆ. ಆ ಮಟ್ಟಕ್ಕೆ ಅಲ್ಲಿ ಪ್ರಾದೇಶಿಕ ಪಕ್ಷಗಳು ನೆಲೆ ಕಂಡುಕೊಂಡಿವೆ. ಆದರೆ ಕರ್ನಾಟಕದಲ್ಲಿ ಐದಾರು ಜಿಲ್ಲೆಗಳಿಂದಾಚೆಗೆ ಜೆಡಿಎಸ್ ಅಸ್ತಿತ್ವ ಇಲ್ಲ. ಜನತೆ ಒಲವು ತೋರಿಸಿಲ್ಲ ಎನ್ನುವುದಕ್ಕಿಂತ ಪಕ್ಷವನ್ನು ವಿಸ್ತರಿಸುವ ಗೋಜಿಗೆ ಹೋಗುತ್ತಿಲ್ಲ ಎನ್ನುವುದು ಮುಖ್ಯವಾದ ಸಂಗತಿ. ಜೆಡಿಎಸ್ ನಿಂತಿರುವ ನೆಲೆಯೂ ಕುಸಿಯುತ್ತಿದೆ.

ಫಲಿತಾಂಶದಲ್ಲಿ ಇದು ವ್ಯಕ್ತವಾಗಿದೆ. ಹಾಗೆಂದು ಕೈಚೆಲ್ಲಿ ಕೂರಬೇಕಿಲ್ಲ. ಮರಳಿ ಯತ್ನವ ಮಾಡಿ ಧೂಳಿನಿಂದ ಎದ್ದು ಬರುವ ಕೆಲಸ ಮಾಡಬೇಕು. ಕುಮಾರಸ್ವಾಮಿ ಅವರಿಗೆ ಅಂತಹ ಸಾಮರ್ಥ್ಯವಿದೆ. ಸ್ಟಾಲಿನ್ ಮತ್ತು ಜಗನ್ ಮೋಹನ್ ರೆಡ್ಡಿ ತಮ್ಮ ತಮ್ಮ ಪಕ್ಷದ ಚುಕ್ಕಾಣಿ ಹಿಡಿದಾಗ ಆ ಪಕ್ಷಗಳು ಹೀನಾಯ ಸ್ಥಿತಿಯಲ್ಲಿದ್ದವು ಎನ್ನುವುದನ್ನು ಮರೆಯಬಾರದು.

ಸ್ಟಾಲಿನ್ ತಮಿಳುನಾಡಿನಲ್ಲಿ ಮತ್ತು ಜಗನ್ ಆಂಧ್ರಪ್ರದೇಶದಲ್ಲಿ ಪಕ್ಷವನ್ನು ಸಂಘಟಿಸಿದ್ದು ಒಂದು ರೋಚಕ ಇತಿಹಾಸ. ಈ ಹೋರಾಟವನ್ನು ಕುಮಾರಸ್ವಾಮಿ ಸ್ಫೂರ್ತಿಯಾಗಿ ತೆಗೆದುಕೊಂಡು ಮತ್ತೆ ಪಕ್ಷವನ್ನು ಸಂಘಟಿಸಿದರೆ ರಾಜ್ಯದ ಜನತೆ ಕೈ ಹಿಡಿಯುವುದರಲ್ಲಿ ಸಂಶಯವಿಲ್ಲ.

# ರಾಜ್ಯದ ಅತೀ ದೊಡ್ಡ ಜಿಲ್ಲೆಯಲ್ಲಿ ಚುನಾವಣಾ ಪ್ರಕ್ರಿಯೆ ಯಶಸ್ವಿ

## ಜಿಲ್ಲಾಧಿಕಾರಿಗಳ ಶ್ರಮ; ಅಧಿಕಾರಿ, ಸಿಬ್ಬಂದಿಗಳ ಅನವರತ ಶ್ರಮದ ಫಲ

ಬೆಳಗಾವಿ: ರಾಜ್ಯದ ಅತೀ ದೊಡ್ಡ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಹದಿನೆಂಟು ಮತಕ್ಷೇತ್ರಗಳಿವೆ. ಬೆಂಗಳೂರು ಹೊರತುಪಡಿಸಿದರೆ ಅತೀ ಹೆಚ್ಚು ಕ್ಷೇತ್ರಗಳಿರುವುದು ಇಲ್ಲಿಯೇ. ಈ ಜಿಲ್ಲೆಯಲ್ಲಿ ಚುನಾವಣಾ ನಡೆಸುವುದು ಹೆಚ್ಚುಕಡಿಮೆ ಒಂದು ಚಿಕ್ಕ ರಾಜ್ಯದ ಚುನಾವಣೆ ನಡೆಸುವುದಕ್ಕೆ ಸಮ!

ಈ ಜಿಲ್ಲೆಯ ಹದಿನೆಂಟು ಮತಕ್ಷೇತ್ರಗಳಲ್ಲಿ ಚುನಾವಣೆ ನಡೆಸುವುದು ಅತ್ಯಂತ ಸವಾಲಿನ ಕೆಲಸ. ಈ ಸವಾಲನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರಿಗೆ ಸಲ್ಲುತ್ತದೆ.

ಮತದಾರರ ಪಟ್ಟಿ ಸಿದ್ಧಪಡಿಸುವುದರಿಂದ ಹಿಡಿದು ಮತ ಎಣಿಕೆ ಪೂರ್ಣಗೊಳಿಸುವವರೆಗೆ ಪ್ರತಿಯೊಂದು ಕೆಲಸವೂ ಮಹತ್ತದ್ದಾಗಿರುತ್ತದೆ.

22 ಸಾವಿರಕ್ಕೂ ಅಧಿಕ ಅಧಿಕಾರಿಗಳು/ಸಿಬ್ಬಂದಿಯನ್ನು ಬಳಸಿಕೊಂಡು ಚುನಾವಣಾ ಪ್ರಕ್ರಿಯೆಯನ್ನು ಅತ್ಯಂತ ಸಮರ್ಪಕವಾಗಿ ಹಾಗೂ ಅಚ್ಚುಕಟ್ಟಾಗಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ನಿರ್ವಹಿಸಿರುವುದು ಎಲ್ಲರ ಮೆಚ್ಚುಗೆ ಗಳಿಸಿದೆ.

ಇಂತಹ ದೊಡ್ಡ ಸವಾಲು ಸಮರ್ಪಕವಾಗಿ ನಿರ್ವಹಿಸಲು ಸಾಥ್ ನೀಡಿದವರು ಬೆಳಗಾವಿ ನಗರ ಪೊಲೀಸ್ ಆಯುಕ್ತರಾದ ಡಾ. ಎಂ.ಬಿ.ಬೋರಲಿಂಗಯ್ಯ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ಅವರು.

ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯದ ಜತೆ ಗಡಿ ಹಂಚಿಕೊಂಡಿರುವ ಬೆಳಗಾವಿ ಜಿಲ್ಲೆಯಲ್ಲಿ ಚೆಕ್ ಪೋಸ್ಟ್ ಸ್ಥಾಪನೆ, ಭದ್ರತೆ ನಿಯೋಜನೆ ಕೂಡ ಅಷ್ಟೇ ಸವಾಲಿನ ಕೆಲಸವಾಗಿದ್ದು, ಇಬ್ಬರೂ ಅಧಿಕಾರಿಗಳು ಸಮರ್ಪಕವಾಗಿ ನಿರ್ವಹಿಸುವ ನ್ಯಾಯಸಮ್ಮತ ಹಾಗೂ ಸುಗಮ ಚುನಾವಣೆ ನಡೆಸುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ



ಒಂದು ತಿಂಗಳಿನಿಂದ ವಿವಿಧ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಚುನಾವಣಾ ಪ್ರಕ್ರಿಯೆಯಲ್ಲಿ ಜನರು ಭಾಗವಹಿಸಲು ಪ್ರೇರಪಣೆ ನೀಡಿದವರು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಪಂಚಾಯತ ಸಿಇಓ ಹರ್ಷಲ್ ಭೋಯರ್ ಅವರ ಪಾತ್ರ ಕೂಡ ಅಭಿನಂದನೀಯವಾಗಿದೆ.

ಇದಲ್ಲದೇ ಕಂದಾಯ, ಪೊಲೀಸ್, ಗ್ರಾಮೀಣಾಭಿವೃದ್ಧಿ, ಅಬಕಾರಿ, ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಇಡೀ ಜಿಲ್ಲೆಯ ಎಲ್ಲ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಚುನಾವಣಾ ಕಾರ್ಯದಲ್ಲಿ ಹಗಲಿರುಳು ಶ್ರಮಿಸುರುವುದು ಉಲ್ಲೇಖನೀಯವಾಗಿದೆ.

ಒಟ್ಟಾರೆ ಪ್ರಜಾಪ್ರಭುತ್ವದ ಹಬ್ಬವಾಗಿರುವ ಚುನಾವಣೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿರುವುದಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

**ಶಾಂತಿಯುತ ಮತದಾನ; ಜಿಲ್ಲಾಧಿಕಾರಿ ಕೃತಜ್ಞತೆ:**

ಬೆಂಗಳೂರು ನಗರ ಹೊರತುಪಡಿಸಿದರೆ ಅತೀ ವಿಧಾನಸಭಾ ಮತಕ್ಷೇತ್ರಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆಯು ರಾಜ್ಯದ ದೊಡ್ಡ ಜಿಲ್ಲೆಯಾಗಿದೆ.

ಇಂತಹ ದೊಡ್ಡ ಜಿಲ್ಲೆಯಲ್ಲಿ ಪಾರದರ್ಶಕ, ನ್ಯಾಯಸಮ್ಮತ ಮತ್ತು ಸುಗಮ ರೀತಿಯಲ್ಲಿ ಮತದಾನ ಮತ್ತು ಮತ ಎಣಿಕೆ ನಡೆಸಲು ಕಂದಾಯ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ, ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತಿ ಸೇರಿದಂತೆ ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಗಲಿರುಳು ಶ್ರಮಿಸಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇದಲ್ಲದೇ ಬೆಳಗಾವಿ ನಗರ ಪೊಲೀಸ್ ಆಯುಕ್ತರಾದ ಡಾ.ಎಂ.ಬಿ.ಬೋರಲಿಂಗಯ್ಯ ಮತ್ತು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ್ ಪಾಟೀಲ ಅವರು ಸೂಕ್ತ ಭದ್ರತೆ ಒದಗಿಸುವುದರ ಜತೆಗೆ ನಾಗರಿಕರು ನಿರ್ಭೀತಿಯಿಂದ ಮತಚಲಾಯಿಸುವ ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ. ಮತ ಎಣಿಕೆ ಕೂಡ ಸುಗಮವಾಗಿ ನಡೆದಿರುತ್ತದೆ.

ಜಿಲ್ಲೆಯಲ್ಲಿ ಒಟ್ಟಾರೆ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಸಹಕರಿಸಿದ ಎಲ್ಲ ಇಲಾಖೆಯ ಅಧಿಕಾರಿ ಸಿಬ್ಬಂದಿ, ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ತಿಳಿಸಿದ್ದಾರೆ.

## ಬಿಜೆಪಿಯ 'ಕೆಟ್ಟ' ಆಡಳಿತದ ವಿರುದ್ಧ ಜನರು 'ಕೋಪದಿಂದ' ನಮಗೆ ಮತ ಹಾಕಿದ್ದಾರೆ: ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉತ್ತಮ ಪ್ರದರ್ಶನವನ್ನು 'ಜನತಾ ಜನಾರ್ಧನ'ನ ಗೆಲುವು ಎಂದು ಬಣ್ಣಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದಲ್ಲಿ ಬಿಜೆಪಿಯ 'ಕೆಟ್ಟ ಆಡಳಿತ'ದ ವಿರುದ್ಧ ಜನರು 'ಉಗ್ರವಾಗಿ' ಮತ ಚಲಾಯಿಸಿದ್ದಾರೆ ಎಂದು ಹೇಳಿದರು.



ನೂತನವಾಗಿ ಆಯ್ಕೆಯಾಗಿರುವ ಎಲ್ಲಾ ಕಾಂಗ್ರೆಸ್ ಶಾಸಕರು ಇಂದು ಸಂಜೆಯೊಳಗೆ ಬೆಂಗಳೂರಿಗೆ ಆಗಮಿಸುವಂತೆ ತಿಳಿಸಲಾಗಿದ್ದು, ಸರ್ಕಾರ ರಚನೆಯ ಸೂಕ್ತ ಪ್ರಕ್ರಿಯೆಯನ್ನು ಅನುಸರಿಸಲಾಗುವುದು ಎಂದರು.

'ನಾವು ಎಲ್ಲರಿಗೂ (ಹೊಸದಾಗಿ ಆಯ್ಕೆಯಾದ ವ್ಯಕ್ತಿಗಳು) ಇಂದು ಸಂಜೆಯೊಳಗೆ ಬನ್ನಿ ಎಂದು ಸಂದೇಶವನ್ನು ಕಳುಹಿಸಿದ್ದೇವೆ. ಅವರೆಲ್ಲರೂ ಇಂದು ಸಂಜೆಯೊಳಗೆ ಇಲ್ಲಿಗೆ ಬರುತ್ತಾರೆ ಮತ್ತು ಅವರು ಬಂದ ನಂತರ ಅವರಿಗೆ ಸರಿಯಾದ ಸಮಯದಲ್ಲಿ ಸೂಚನೆ ನೀಡಲಾಗುವುದು. ಅದರ ನಂತರ, ಹೈಕಮಾಂಡ್ ವೀಕ್ಷಕರನ್ನು ಕಳುಹಿಸುತ್ತದೆ. ನಂತರ ಸರ್ಕಾರ ರಚನೆಗೆ ಸರಿಯಾದ ಪ್ರಕ್ರಿಯೆಗಳನ್ನು ಅನುಸರಿಸಲಾಗುತ್ತದೆ' ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್‌ನ ಉತ್ತಮ ಪ್ರದರ್ಶನವು 'ಜನತಾ ಜನಾರ್ಧನ' ವಿಜಯವಾಗಿದೆ. ಜನರೇ ಎದ್ದು ನಿಂತು ನಮ್ಮನ್ನು ಬೆಂಬಲಿಸಿದ್ದಾರೆ, ಕೆಟ್ಟ ಆಡಳಿತದ ವಿರುದ್ಧ ಉಗ್ರವಾಗಿ ಮತ ಹಾಕಿದ್ದಾರೆ. ಇದು ಕರ್ನಾಟಕದ ಮತದಾರರು ಎಚ್ಚೆತ್ತಿರುವುದನ್ನು ತೋರಿಸುತ್ತದೆ ಎಂದರು.

## ಪಶ್ಚಿಮ ಬಂಗಾಳದಲ್ಲಿ 'ದಿ ಕೇರಳ ಸ್ಟೋರಿ' ಸಿನಿಮಾಗೆ ನಿಷೇಧ: ಕೋಮಾದಲ್ಲಿ ಪ್ರಜಾಪ್ರಭುತ್ವ; ಜೆ.ಪಿ ನಡ್ಡಾ

ನವದೆಹಲಿ: ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ದಿ ಕೇರಳ ಸ್ಟೋರಿ' ಚಿತ್ರದ ಮೇಲೆ ನಿಷೇಧ ಹೇರಿದ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಟೀಕಾ ಪ್ರಹಾರ ನಡೆಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವವು ಕೋಮಾದಲ್ಲಿದೆ ಎಂದು ಆರೋಪಿಸಿದರು. ಬ್ಯಾನರ್ಜಿಯವರ ಅಡಿಯಲ್ಲಿ ರಾಜ್ಯ ಯಂತ್ರವು ಕುಸಿದಿದೆ ಎಂದು ಆರೋಪಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ "ಡೆಮಾಕ್ರಸಿ ಇನ್ ಕೋಮಾ-ಸೈಲೆನ್ಸ್ ವಾಯ್ಸ್ ಆಫ್



ವಿಮೆನ್ ವಿಕ್ಟಿಮ್ಸ್ ಇನ್ ವೆಸ್ಟ್ ಬೆಂಗಾಲ್" ಎಂಬ ಪುಸ್ತಕವನ್ನು ಅನಾವರಣ ಗೊಳಿಸಿದ ನಂತರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಪ್ರಜಾ ಪ್ರಭುತ್ವದ ಚಾಂಪಿಯನ್‌ಗಳಲ್ಲಿ ಒಬ್ಬರಾದ ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದಲ್ಲಿ ಅದನ್ನು ಸಿನಿಮಾ ನಿಷೇಧಿಸಿದ್ದಾರೆ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಏನೂ ಉಳಿದಿಲ್ಲ. ಇದು ರಾಜ್ಯದಲ್ಲಿ ಕೋಮಾದಲ್ಲಿರುವ ಪ್ರಜಾಪ್ರಭುತ್ವವಾಗಿದೆ" ಎಂದು ಅವರು ಲೇವಡಿ ಮಾಡಿದ್ದಾರೆ.

"ಟಿಎಂಸಿ ಸರ್ಕಾರವು ಕೈಗೊಂಡ ಎಲ್ಲಾ ರೀತಿಯ ಚಟುವಟಿಕೆಗಳು ಮತ್ತು ಕ್ರಮಗಳಿಗೆ ಯಾರು ವಿರೋಧಿಸಿದೆ ಮೌನವಾಗಿ ರುವಂತೆ ನೋಡಿಕೊಳ್ಳುತ್ತಿದೆ ಎಂದು ನಡ್ಡಾ ದೂರಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಘಟನೆಗಳು "ಅತ್ಯಂತ ಕಳವಳಕಾರಿಯಾಗಿದ್ದು ನೋವಿನಿಂದ ಕೂಡಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (ಎನ್‌ಸಿಆರ್‌ಬಿ) ದತ್ತಾಂಶವನ್ನು ಉಲ್ಲೇಖಿಸಿ, ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು ಶೇಕಡಾ 74.6 ರಷ್ಟಿದೆ. ಆಸಿಡ್ ದಾಳಿಯ ಪ್ರಕರಣಗಳಿಗೆ ಬಂದಾಗ ರಾಜ್ಯವು ಅಗ್ರಸ್ಥಾನದಲ್ಲಿದೆ ಎಂದು ನಡ್ಡಾ ಹೇಳಿದರು.

## ಗೆಲುವಿನ ಸಂಭ್ರಮದಲ್ಲಿ ರೋಡ್ ಶೋ ನಡೆಸಿದ ಡಿಕೆಶಿ

ರಾಮನಗರ: ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯಾದ್ಯಂತ ಪ್ರಚಂಡ ಜಯಭೇರಿ ಬಾರಿಸುತ್ತಿದ್ದಂತೆಯೇ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ತವರು ಜಿಲ್ಲೆ ರಾಮನಗರದಲ್ಲಿ ಭರ್ಜರಿ ರೋಡ್ ಶೋ ನಡೆಸಿದ್ದಾರೆ.

ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 1 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಡಿಕೆ ಶಿವಕುಮಾರ್ ರೋಡ್ ಶೋ ನಡೆಸುವ ಮೂಲಕ ಜನತೆಗೆ



ಕೃತಜ್ಞತೆ ಸಲ್ಲಿಸಿದ್ದಾರೆ.

ನಂತರ, ಚುನಾವಣಾಧಿಕಾರಿಗಳಿಂದ ಚುನಾವಣೆಯಲ್ಲಿ ಗೆದ್ದ ಪ್ರಮಾಣ ಪತ್ರವನ್ನು ಡಿಕೆ ಶಿವಕುಮಾರ್ ಪಡೆದರು. ಸಂಸದ ಡಿ.ಕೆ. ಸುರೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಗೆಲುವಿನ ನಗೆ ಬೀರಿದ ವಿನಯ್ ಕುಲಕರ್ಣಿ



ಧಾರವಾಡ: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮಾಜಿ ಸಚಿವ ವಿನಯ್ ಕುಲಕರ್ಣಿ, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಅಮೃತ್ ದೇಸಾಯಿ ವಿರುದ್ಧ ಜಯಭೇರಿ ಬಾರಿಸಿದ್ದಾರೆ.

ಮಹತ್ವದ ಸಂಗತಿ ಎಂದರೆ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ವಿನಯ ಕುಲಕರ್ಣಿ ಅವರ ಕ್ಷೇತ್ರ ಪ್ರವೇಶಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರ್ಬಂಧ ಹೇರಿದ್ದರೂ ಪ್ರಚಾರಕ್ಕಾಗಿ ಕ್ಷೇತ್ರಕ್ಕೆ ತೆರಳದ ವಿನಯ್ ಕುಲಕರ್ಣಿ ಕೆಲವು ಸಾಧಿಸಿದ್ದಾರೆ.

## ಕರ್ನಾಟಕದಲ್ಲಿ ಬಜರಂಗದಳ ನಿಷೇಧಕ್ಕೆ ಹೆದರುವುದಿಲ್ಲ

ಇಂದೋರ್: ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಜರಂಗದಳ ನಿಷೇಧಿಸುವುದಾಗಿ ಭರವಸೆ ನೀಡಿತ್ತು ಮತ್ತು ಈಗ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೇರುತ್ತಿದೆ. ಈ ಹಿನ್ನೆಲೆಯಲ್ಲಿ ಬಜರಂಗದಳ ನಿಷೇಧಕ್ಕೆ ಹೆದರುವುದಿಲ್ಲ ಎಂದು ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ಪದಾಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

ಇಂದೋರ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿಎಚ್‌ಪಿ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಅವರು, ಹಿಂದೂಗಳ ಮೇಲಿನ ದ್ವೇಷದಿಂದ ಭಜರಂಗದಳವನ್ನು ನಿಷೇಧಿಸಿದರೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದಿದ್ದಾರೆ.

ರಾಮಜನ್ಮಭೂಮಿ ಆಂದೋಲನದ ಸಂದರ್ಭದಲ್ಲಿ ಬಜರಂಗದಳವನ್ನು ನಿಷೇಧಿಸಲಾಗಿತ್ತು. ಆದರೆ ಅದು ತಪ್ಪು ಎಂದು ನ್ಯಾಯಾಲಯ ರದ್ದುಗೊಳಿಸಿತ್ತು



ಎಂದು ಹೇಳಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಜಾತಿ ಅಥವಾ ಧರ್ಮದ ಆಧಾರದ ಮೇಲೆ ಸಮುದಾಯಗಳ ನಡುವೆ ದ್ವೇಷ ಹರಡುವ ವ್ಯಕ್ತಿಗಳು ಮತ್ತು ಪಿಎಫ್‌ಐ ಹಾಗೂ ಬಜರಂಗದಳದಂತಹ ಸಂಘಟನೆಗಳ ವಿರುದ್ಧ ದೃಢ ಮತ್ತು ನಿರ್ಣಾಯಕ ಕ್ರಮ ಕೈಗೊಳ್ಳಲು ಬದ್ಧ ಎಂದು ಹೇಳಿತ್ತು.

## ದಾದಿಯುರು ತಾಯಿಯಂತೆ ಪೋಷಿಸುವ ಸಹೋದರಿಯಂತೆ ಪ್ರೀತಿಸುವ ದೇವಗಣ

ಬೆಳಗಾವಿ: ಕಾರ್ಯದಕ್ಷತೆಯಿಂದ ಗೌರವ ಗಳಿಸಿ ಎಂದು ಬೆಳಗಾವಿ ಮಿಲಿಟರಿಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕಿ ಲೆಫ್ಟಿನೆಂಟಕರ್ನಲ್ ಶ್ರೀಮತಿ ಮೀನಾ ಎಪ್ ಎ ಮಾತನಾಡುತ್ತಿದ್ದರು. ಅವರು ನಗರದ ಕೆ ಎಲ್ ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯಚರಕಾ ಸಭಾಂಗಣದಲ್ಲಿ ನಡೆದ "ವಿಶ್ವದಾದಿಯರ ದಿನಾಚರಣೆ"ಯ ಅಂಗವಾಗಿ ಮಾತನಾಡುತ್ತಿದ್ದರು.

ವೈದ್ಯರು ಪ್ರತಿಯೊಬ್ಬರೋಗಿಯ ಪಾಲಿಗೆ ದೇವರಿದ್ದಂತೆ ನಿಜ ಆದರೆ ದಾದಿಯುರು ಆ ರೊಗಿಗಳನ್ನು ತಾಯಿಯಂತೆ ಪೋಷಿಸುವ ಸಹೋದರಿಯಂತೆ ಪ್ರೀತಿಸುವ ದೇವಗಣಗಳಾಗಿದ್ದಾರೆ. ಅದರಲ್ಲೂ ಈ ವರ್ಷ ವಿಶ್ವ ಆರೋಗ್ಯ ಸಂಸ್ಥೆಯಿಂದ ವಿಶ್ವದಾದಿಯರ ದಿನದಘೋಷ ವಾಖ್ಯವಾದ" ನಮ್ಮದಾದಿಯರು ನಮ್ಮ ಭವಿಷ್ಯ"- ಎಂಬುದು ಅಕ್ಷರ ಸಹ ಸತ್ಯವಾಗಿದೆ. ಒಂದು ವೇಳೆ ದಾದಿಯರು ಇಲ್ಲದೇ ಇದ್ದರೆ ಪ್ರತಿಯೊಬ್ಬರೋಗಿಯ ಸ್ಥಿತಿಯೂ




ಊಹಿಸಲ ಸಾಧ್ಯವಾಗಿದೆ. ಎಂದು ಸಮಾಜದಲ್ಲಿ ದಾದಿಯರ (ನರ್ಸ್‌ಸ) ಪ್ರಾಮುಖ್ಯತೆಯ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದಯು ಎಸ್‌ಎಮ್ ಕೆ ಎಲ್ ಇ ನಿರ್ದೇಶಕರಾದ ಡಾ. ಹೆಚ್ ಬಿ ರಾಜಶೇಖರ ಅವರು ಮಾತನಾಡುತ್ತ" ವೈದ್ಯರುರೋಗಿಯನ್ನು ತಪಾಸಣೆ ಮಾಡುವದು ಅವರ ಚಿಕಿತ್ಸೆ ಮಾಡುವದು ಕೆಲವು ಸಮಯ ಮಾತ್ರಆದರೆ ಒಬ್ಬದಾದಿಯು ಆ ರೋಗಿಯುಆಸ್ಪತ್ರೆಗೆ ಬಂದಾಗಿನಿಂದ ಹಿಡಿದುಆತನು ನಿರೋಗಿಯಾಗಿ ಹೊರ ಹೋಗುವವರೆಗೆ ಆತನನ್ನು ಕಾಳಜಿಯಿಂದ ನೋಡಿಕೊಂಡು ಆತನ ಸಂತೋಷಕ್ಕೆ ಕಾರಣೀ ಭೂತಳಾಗುತ್ತಾಳೆ. ಅದರಲ್ಲಿಯೂ ನಮ್ಮಭಾರತದಂತಹ ದೇಶದಲ್ಲಿ ಇಂದು ನರ್ಸಿಂಗ ಸಿಬ್ಬಂದಿಯ ಕೊರತೆಯು ಬಹಳವಾಗಿದೆ.

ನಮ್ಮ ಭಾರತದ ಆರೋಗ್ಯವನ್ನು ಸರಿದೂಗಿಸಲು ಒಂದು ಅಧ್ಯಯನದ ಪ್ರಕಾರ ಸರಿಸುಮಾರು 50 ಲಕ್ಷದಷ್ಟುದಾದಿ ಸಿಬ್ಬಂದಿಯ ಕೊರತೆಯನ್ನು ಅನುಭವಿಸುತ್ತಿದೆ. ಆದ್ದರಿಂದ ನರ್ಸಿಂಗ ಶಿಕ್ಷಣ ಹಾಗೂ ಉದ್ಯೋಗದ ಬಗ್ಗೆ ಇರುವ ದ್ವಂದ್ವಗಳಿಂದ ಹೊರಬಂದು ಹೆಚ್ಚು ಹೆಚ್ಚು ಜನರು ಈ ವೃತ್ತಿಯನ್ನು- ಆಯ್ಕೆ ಮಾಡಿಕೊಳ್ಳುವ ಮೂಲಕ ಆರೋಗ್ಯಯುತ ಸಮಾಜ ನೀರ್ಮಾಣ ಮಾಡುವಲ್ಲಿ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೆ ಎಲ್ ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಎಸ ಸಿ ಧಾರವಾಡಅವರು ಮಾತನಾಡುತ್ತ" ದಾದಿಯರ ವೃತ್ತಿಯು ನಿಜಕ್ಕೂ ಸವಾಲೆನ್ನಿಸುವ ಕೆಲಸವಾಗಿದೆ. ಇದರಲ್ಲಿ ಒಬ್ಬರೋಗಿಗೆ ವೈದ್ಯರು ದೈಹಿಕ ಆರೋಗ್ಯ ಸುಧಾರಣೆಗೆ ಔಷಧಿಗಳನ್ನು ನೀಡಿದರೂ ಆತನನ್ನು ಮಾನಸಿಕವಾಗಿ ಸನ್ನದ್ದಗೊಳಿಸುವಲ್ಲಿ ದಾದಿಯರ ಪಾತ್ರ ಮಹತ್ವದ್ದಾಗಿದೆ. ರೋಗಿಯ ಉಪಚಾರವಷ್ಟೇ ಅಲ್ಲದೇ ಸಮಾಜದಲ್ಲಿ ರೋಗಗಳು ಹರಡದಂತೆ, ಉಲ್ಬಣಿಸದಂತೆ ಆರೋಗ್ಯವಂತ ನಾಗರಿಕರಿಗೆ ಅವಶ್ಯಕ ಶಿಕ್ಷಣ ನೀಡುವದುಕೂಡ ಮುಖ್ಯವಾಗಿದೆ ಈ ಮೂಲಕ ಪ್ರತಿಯೊಬ್ಬದಾದಿಯು ಹೆಸರು ವಾಸಿಯಾಗುವ ದಷ್ಟೇ ಅಲ್ಲದೇತಾನು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗೂ ಕೂಡಗೌರವವನ್ನು ತರುತ್ತಾರೆ ಎಂದು ತಿಳುವಳಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಬೆಳಗಾವಿ ಮಿಲಿಟರಿಆಸ್ಪತ್ರೆಯ ಮೇಜರ ಮಂಜುರವರು ಉಪಸ್ಥಿತರಿದ್ದರು. ಹಿರಿಯ ಶಸ್ತ್ರ ಚಿಕಿತ್ಸಜ್ಞ ಡಾ. ಎ ಕೆ ರಡ್ಡೇರ, ಪ್ರಯೋಗಾಲಯ ವಿಭಾಗದ ಮುಖ್ಯಸ್ಥಡಾ. ಅಶೋಕ ಅಲತಗಿ, ಹೆಸರಾಂತ ಎಲುಬು ಕೀಲು ತಜ್ಞಡಾ. ಜಗದೀಶ ಸುರಣ್ಣವರ, ಹಿರಿಯ ವೈದ್ಯರಾದಡಾ. ಯಡೂರ, ಡಾ.ಮೋಹನ ಅಶ್ವತಪೂರ, ಆಸ್ಪತ್ರೆಯ ಸಮಸ್ತ ವೈದ್ಯಕೀಯ ವೈದ್ಯಕೀಯೇತರ ಸಿಬ್ಬಂದಿ ಹಾಗೂ ಕೆ ಎಲ್ ಇ ಸೆಂಟಿನರಿಇನ್ಸ್ಟಿಟ್ಯುಟ್ ನರ್ಸಿಂಗ ಸೈನ್ಸ ನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನುಆಸ್ಪತ್ರೆಯುದಾದಿ ಸಿಬ್ಬಂದಿಯಾದ ಕು. ಹನೀ ಹಾಗೂ ಕು. ಮುಸ್ಕಾನ ನಿರೂಪಿಸಿದರು.ಶ್ರೀ ಪ್ರಶಾಂತ ಅಂಕಲೆ ಸ್ವಾಗತಿಸಿದರು.

ಆರೋಗ್ಯ ಸಹಾಯಕಿ ತರಬೇತಿ-ದಾರರಾದ ಶ್ರೀ ಪ್ರಬಾವತಿ ಕಾದ್ರೊಳ್ಳಿ ವಂದಿಸಿದರು.

## ರಾಹುಲ್ ಗಾಂಧಿಯನ್ನು ತಡೆಯಲು ಸಾಧ್ಯವಿಲ್ಲ, ಭಾರತ್ ಜೋಡೋ ಯಾತ್ರೆ ಫಲ ಕೊಟ್ಟಿದೆ: ಕಾಂಗ್ರೆಸ್

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿ ಅಧಿಕಾರದ ಚುಕ್ಕಾಣಿ ಹಾದಿ ಹಿಡಿಯುತ್ತಿದ್ದಂತೆ ಕಾಂಗ್ರೆಸ್ ವಿಡಿಯೊವೊಂದನ್ನು ಹಂಚಿಕೊಂಡಿದೆ.



ಅದರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ಸಂಬಂಧಿಸಿದ ವಿಡಿಯೊವಾಗಿದ್ದು ಅವರನ್ನು ತಡೆದು ನಿಲ್ಲಿಸಲು ಸಾಧ್ಯವಿಲ್ಲ ಎಂಬ ಸಂದೇಶ ನೀಡಿದೆ.

50 ಸೆಕೆಂಡ್ ಗಳ ವಿಡಿಯೊದಲ್ಲಿ ಕೆಲ ತಿಂಗಳ ಹಿಂದೆ ರಾಹುಲ್ ಗಾಂಧಿ ಕರ್ನಾಟಕ ಸೇರಿದಂತೆ ವಿವಿಧ ಭಾಗಗಳಲ್ಲಿ ನಡೆಸಿದ ಭಾರತ್ ಜೋಡೋ ಯಾತ್ರೆಗೆ ಸಂಬಂಧಿಸಿದ ವಿಡಿಯೊ ಅದಾಗಿದೆ.

ಸಿಯಾ ಅವರ 'ಅನ್ ಸ್ಟಾಪೇಬಲ್' ಸಂಗೀತವನ್ನು ಹಿನ್ನಲೆಯಾಗಿ ವಿಡಿಯೊ ಹೊಂದಿದೆ.

ರಾಹುಲ್ ಅವರನ್ನು ಉದ್ದೇಶಿಸಿ ಕಾಂಗ್ರೆಸ್ ನಾನು ಅಜೇಯ, ತುಂಬಾ ವಿಶ್ವಾಸ ಹೊಂದಿದ್ದೇನೆ, ಹೌದು, ನನ್ನನ್ನು ಯಾರೂ ತಡೆಯಲು ಸಾಧ್ಯವಿಲ್ಲ ಎಂದು ಬರೆಯಲಾಗಿದೆ.

## ಜನತೆ ನೀಡಿದ ಜನಾದೇಶಕ್ಕೆ ತಲೆಬಾಗುತ್ತೇನೆ. ಸೋಲಿನ ಬಳಿಕ ಸಿ.ಟಿ ರವಿ



ಚಿಕ್ಕಮಗಳೂರು: ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ ರವಿ ಸೋಲನುಭವಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎಚ್.ಡಿ ತಮ್ಮಯ್ಯ ವಿರುದ್ಧ ಸಿ.ಟಿ ರವಿ ಸೋಲುಂಡಿದ್ದಾರೆ. ಸೋಲಿನ ಬೆನ್ನಲ್ಲೇ ಸಿ.ಟಿ ರವಿ ಅವರು ಮತದಾರರಿಗೆ ಬಹಿರಂಗ ಪತ್ರ ಬರೆದಿದ್ದಾರೆ. ಪತ್ರದಲ್ಲಿ 'ಜನತೆ ನೀಡಿದ ಜನಾದೇಶಕ್ಕೆ ತಲೆಬಾಗುತ್ತೇನೆ.

ಸೋಲು ಗೆಲುವು ಸ್ವಾಭಾವಿಕ, ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತೇನೆ' ಎಂದು ತಿಳಿಸಿದ್ದಾರೆ.

## ಇನ್ನುಮುಂದೆ ತನ್ನ ತಂತ್ರಗಳು ನಡೆಯಲ್ಲ ಎಂದು ಬಿಜೆಪಿ ಅರಿತುಕೊಳ್ಳಬೇಕು: ಕೇಜ್ರಿವಾಲ್

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಕಾಂಗ್ರೆಸ್ ಗೆ ಅಭಿನಂದನೆ ಸಲ್ಲಿಸಿದ ಎಎಪಿ ರಾಷ್ಟ್ರೀಯ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು,



ಬಿಜೆಪಿ ತನ್ನ ತಂತ್ರಗಳು ಇನ್ನು ಮುಂದೆ ಕೆಲಸ ಮಾಡುವುದಿಲ್ಲ ಎಂಬುದನ್ನು ಈಗಲೇ ಅರಿತುಕೊಳ್ಳಬೇಕು ಎಂದು ಶನಿವಾರ ಹೇಳಿದ್ದಾರೆ.

ಆದಾಗ್ಯೂ, ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಎಎಪಿಯ ಹೀನಾಯ ಸೋಲನ್ನು ಒಪ್ಪಿಕೊಂಡ ದೆಹಲಿ ಸಿಎಂ, ಕರ್ನಾಟಕದಲ್ಲಿಯೂ ಗೆಲ್ಲುವ ಸಮಯ ಬರುತ್ತದೆ ಎಂದು ಹೇಳಿದ್ದಾರೆ.

ಚುನಾವಣಾ ಆಯೋಗದ ವೆಬ್‌ಸೈಟ್ ಪ್ರಕಾರ, ಎಎಪಿ ಕೇವಲ ಶೇಕಡಾ 0.58 ರಷ್ಟು ಮತಗಳನ್ನು ಪಡೆದುಕೊಂಡಿದೆ.

ಪಂಜಾಬ್‌ನ ಜಲಂಧರ್ ಲೋಕಸಭಾ ಉಪಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಸುಶೀಲ್ ರಿಂಕು ಅವರ ಗೆಲುವನ್ನು ಕೇಜ್ರಿವಾಲ್ ಶ್ಲಾಘಿಸಿದರು ಮತ್ತು ಇದು "ಐತಿಹಾಸಿಕ ಮತ್ತು ಅಭೂತಪೂರ್ವ" ಗೆಲುವು ಎಂದು ಬಣ್ಣಿಸಿದ್ದಾರೆ.

## ವಿಷಾನಿಲ ಸೇವಿಸಿ 5 ಕಾರ್ಮಿಕರ ಸಾವು

ಮುಂಬೈ: ಒಳಚರಂಡಿ ದುರಸ್ತಿ ಮಾಡುವ ವೇಳೆ ವಿಷಾನಿಲ ಸೇವಿಸಿ 5 ಕಾರ್ಮಿಕರ ಸಾವನ್ನಪ್ಪಿರುವ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ.

ಮಹಾರಾಷ್ಟ್ರದ ಪರಭಾನಿ ಜಿಲ್ಲೆಯ ಸೋನೆಪತ್ ತೆಹಸಿಲ್‌ನ ಭಾವುಚಾ ಗ್ರಾಮದಲ್ಲಿ ಸೆಪ್ಟಿಕ್ ಟ್ಯಾಂಕ್ ಸ್ವಚ್ಛ ಮಾಡುತ್ತಿದ್ದ ವೇಳೆ ಐವರು ಕಾರ್ಮಿಕರು ಸಾವಿಗೀಡಾಗಿದ್ದಾರೆ. ರಾತ್ರಿ ಈ ಘಟನೆ ನಡೆದಿದ್ದು, ಒಬ್ಬರ ಸ್ಥಿತಿ ಗಂಭೀರವಾಗಿದೆ.

ಮೃತರನ್ನು ಫಿರೋಜ್ ಶೇಖ್, ನವೇದ್ ಶೇಖ್, ಜುನೈದ್ ಶೇಖ್ ಮತ್ತು ಸಾದಿಕ್ ಶೇಖ್ ಎಂದು ಗುರುತಿಸಲಾಗಿದೆ. ಗಾಯಾಳು ಸಾಬೀರ್ ಶೇಖ್ ಅವರನ್ನು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಗೆ ಸಂತಾಪ ಸೂಚಿಸಿರುವ



ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ, ಮೃತರ ಕುಟುಂಬಕ್ಕೆ ತಲಾ 10 ಲಕ್ಷ ಘೋಷಿಸಿದ್ದಾರೆ. ಪರಭಾನಿ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ಪ್ರಾರಂಭಿಸಿದ್ದಾರೆ.ವಿಷ ವಾಯು ಉಸಿರಾಟದಿಂದ ಸಾವಿಗೀಡಾಗಿರಬಹುದು ಎಂದು ಅಂದಾಜಿಸಲಾಗಿದೆ. ಪ್ರಸ್ತುತ ಮೃತ ಕಾರ್ಮಿಕರ ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.



## ಜನರ ಜೊತೆಗಿನ ನಿತ್ಯ ಒಡನಾಟ ಸಂಪರ್ಕದಿಂದ ಜನ ಆಶೀರ್ವಾದಿಸಾದ್ದಾರೆ: ರಾಜು ಕಾಗೆ

ಬೆಳಗಾವಿ: ರಾಜ್ಯ ವಿಧಾನ ಸಭಾ ಚುನಾವಣಾ ಮತಯಣಿಕೆ ಭಾಗಶಃ ಮುಗಿದಂತಿದ್ದು ಈ ಹಿನ್ನಲೇ ಯಲ್ಲಿ ಕಾಂಗ್ರೆಸ್ ತನ್ನ ಮುನ್ನಡೆ ಕಾಯ್ದು ಕೊಂಡಿದೆ.

ಕಾಗವಾಡ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜು ಕಾಗೆ ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ ಇದು ನನ್ನ 5ನೆ ಬಾರಿಯ ಗೆಲವು ಜನರ ಜೊತೆ ನಿತ್ಯ ಒಡನಾಟ ಸಂಪರ್ಕದಿಂದ ಜನ ಆಶೀರ್ವಾದ ಮಾಡಿದ್ದಾರೆ.

ಮತಕ್ಷೇತ್ರದ ಅಭಿವೃದ್ಧಿ ನಮ್ಮ ಗುರಿ ಮಹಾರಾಷ್ಟ್ರ ಗಡಿ ಭಾಗದ ಪ್ರದೇಶಗಳು ಬಹಳ ಹಿಂದುಳಿದಿದ್ದು ನೀರಾವರಿ ವಂಚಿತ ಹಳ್ಳಿಗಳಿವೆ ಈ ಹಿನ್ನಲೆಯಲ್ಲಿ ಬಸವೇಶ್ವರ ಏತ ನೀರಾವರಿ ಯೋಜನೆ ಜಾರಿಗೆ ತಂದು ಸಮಸ್ಯೆ ಪರಿಹಾರ ಮಾಡಲಾಗುವುದು ಎಂದರು.

ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆ ಹಣಬಲದವರ ವಿರುದ್ಧ ಗೆದ್ದಿದ್ದೇನೆ ಎಂದು ಹೇಳಿದರು.

# ಜನರ ತೀರ್ಮಾನ ಗೌರವಿಸುತ್ತೇನೆ: ಶೆಟ್ಟರ್

ಹುಬ್ಬಳ್ಳಿ: ಜನರ ತೀರ್ಮಾನವನ್ನು ಗೌರವಿಸುತ್ತೇನೆ. ನನ್ನನ್ನು ಸೋಲಿಸಬೇಕೆಂದು ಹಲವರು ಹಟ ತೊಟ್ಟಿದ್ದರು. ಅವರ ಆಸೆ ಈಡೇರಿದೆ. ಅವರು ನನ್ನನ್ನು ಸೋಲಿಸುವ ಜತೆಗೆ ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಿದ್ದಾರೆ ಎಂದು ಜಗದೀಶ ಶೆಟ್ಟರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಕೊಡದೆ ಇದ್ದುದನ್ನು ಸವಾಲಾಗಿ ಸ್ವೀಕರಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ಸೋತಿದ್ದಕ್ಕೆ ದುಃಖ ಇಲ್ಲ. ನನ್ನ ವಿರುದ್ಧ ಷಡ್ಯಂತ್ರ ಮಾಡಿದವರು ನನಗೆ ಪೆಟ್ಟು ಕೊಡಲು ಹೋಗಿ ಬಿಜೆಪಿಗೆ ಪೆಟ್ಟು ಕೊಟ್ಟಿದ್ದಾರೆ ಎಂದರು.

ನನ್ನನ್ನು ಸೋಲಿಸಲು ಷಡ್ಯಂತ್ರ ಮಾಡಿದ್ದರಿಂದ ಬಿಜೆಪಿ ಅವಸಾನದ ಅಂಚಿಗೆ ಬಂದಿದೆ. ನಾನು ಸಿಂದಗಿ, ಮುದ್ದೇಬಿಹಾಳ, ಕೊಪ್ಪಳ, ಹಾವೇರಿ ಸೇರಿದಂತೆ ಹಲವು ಕಡೆ ಪ್ರವಾಸ ಮಾಡಿದ್ದೆ. ಅಲ್ಲಿ ಕಾಂಗ್ರೆಸ್ ಗೆದ್ದಿದೆ ಎಂದು ಹೇಳಿದರು.

ಲಿಂಗಾಯತ ಸಮುದಾಯಕ್ಕೆ ಅವಮಾನ ಮಾಡಿದ್ದರ ಪರಿಣಾಮ ಮುಂಬೈ ಕರ್ನಾಟಕ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ ಇಡೀ ರಾಜ್ಯದಲ್ಲಿ ಆಗಿದೆ ಎಂದರು.

70 ವರ್ಷದ ನಂತರ ಚುನಾವಣಾ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಹೇಳಿದ್ದೇನೆ. ಈಗ ನನಗೆ 67 ವರ್ಷ. ಮುಂದಿನ ದಿನಗಳಲ್ಲಿ ಏನು ಆಗುತ್ತದೆ ನೋಡೋಣ. ಚುನಾವಣಾ ರಾಜ-ಕಾರಣದಲ್ಲಿ ಇರದಿದ್ದರೂ ಇನ್ನೂ ಹತ್ತು ವರ್ಷ ಕ್ರಿಯಾಶೀಲವಾಗಿ ರಾಜ-ಕಾರಣದಲ್ಲಿ ಇರುತ್ತೇನೆ. ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದರು.

ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರ, ರಾಜ್ಯದಲ್ಲಿಯೂ ಬಿಜೆಪಿ ಸರ್ಕಾರ ಇದ್ದರೂ ಇಂದು ಬಿಜೆಪಿಗೆ ಕಡಿಮೆ ಸೀಟುಗಳು ಬಂದಿವೆ. ಇದು



ಬಿಜೆಪಿ ಅವಸಾನ ಆಗುತ್ತಿರುವುದಕ್ಕೆ ಸಾಕ್ಷಿ. ಜಗದೀಶ ಶೆಟ್ಟರ್ ಅವರನ್ನು ಸೋಲಿಸಬೇಕು ಎಂಬ ಕಾರಣಕ್ಕೆ ದಕ್ಷಿಣ ಭಾರತದಲ್ಲಿ ಅಸ್ತಿತ್ವಕ್ಕೆ ಕಳೆದುಕೊಂಡಿದ್ದಾರೆ ಎಂದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ಪಕ್ಷ ಒಡೆದು ಮೂರು ಹೋಳಾಗಿದ್ದರೂ ನಾನು 40 ಸೀಟುಗಳನ್ನು ಗೆದ್ದಿದ್ದೆ. ಈಗ 60 ಸೀಟು ಗೆಲ್ಲಲು ಗುದ್ದಾಡುತ್ತಿದ್ದಾರೆ ಎಂದು ಹೇಳಿದರು.

ನಾವೇ ಬಿಜೆಪಿಯನ್ನು ಬೆಳೆಸಿದ್ದೆವು. ಕ್ಷೇತ್ರದಲ್ಲಿ ಎಲ್ಲೋ ಒಂದು ಕಡೆ ಜನರ ಆ ಮನಸ್ಥಿತಿ ಬದಲಾಯಿಸಲು ಸಾಧ್ಯವಾಗಲಿಲ್ಲ. ಅದು ಸೋಲಿಗೆ ಕಾರಣ ಇರಬಹುದು. ಒಳ ಹೊಡೆತ ಹೊರ ಹೊಡೆತ ಇಲ್ಲಿ ಕೆಲಸ ಮಾಡಿಲ್ಲ. ಬೂತ್ ಮಟ್ಟದಲ್ಲಿ ಪರಿಶೀಲಿಸಿ ಸೋಲಿಗೆ ಕಾರಣ ಏನು ಎಂಬುದನ್ನು ಪತ್ತೆ ಮಾಡುತ್ತೇನೆ ಎಂದು ಹೇಳಿದರು.

ಗುಜರಾತ್ ಮಾದರಿ ಇಲ್ಲಿ ಕೆಲಸ ಮಾಡಿಲ್ಲ. ಲಿಂಗಾಯತರ ಪ್ರಭಾವ ಇರುವ ಕಡೆಗಳಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದಾರೆ. ಸೋಮಣ್ಣ, ಮುರುಗೇಶ ನಿರಾಣಿ, ಶ್ರೀರಾಮುಲು, ಕಾರಜೋಳ ಅವರಂತ ಪ್ರಮುಖರು ಸೋತಿದ್ದಾರೆ.

ಇದನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳಬೇಕು. ಇದರ ಪರಿಣಾಮ ಮುಂದಿನ ಲೋಕಸಭಾ ಚುನಾವಣೆ ಮೇಲೂ ಆಗಲಿದೆ ಎಂದರು.

ಲಿಂಗಾಯತರನ್ನು ಕಡೆಗಣಿಸಿದ್ದು, ಭ್ರಷ್ಟಾಚಾರ, ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಬೆಲೆ ಏರಿಕೆ ಸೇರಿ ಎಲ್ಲ ಕಾರಣಗಳಿಂದ ಬಿಜೆಪಿ ಸೋಲಿಗೆ ಕಾರಣ. ಲಿಂಗಾಯತರು ಕಾಂಗ್ರೆಸ್ ಪರವಾಗಿ ನಿಂತಿದ್ದಾರೆ ಎಂದು ಹೇಳಿದರು.

ಸೆಂಟ್ರಲ್ ಕ್ಷೇತ್ರದಲ್ಲಿ ನನ್ನನ್ನು ಟಾರ್ಗೆಟ್ ಮಾಡಿ ಹಣ, ಅಧಿಕಾರದ ಪ್ರಭಾವ ಬಳಸಿದರು. ಇಡಿ, ಐಟಿ ದಾಳಿಯ ಬೆದರಿಕೆ ಹಾಕಿ ಭಯದ ವಾತಾವರಣ ಸೃಷ್ಟಿಸಿ ಗೆದ್ದಿದ್ದಾರೆ. ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಈ ಭಾಗದ ಜನರ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದರು.

ಬಿಜೆಪಿಯ ಅಂಹಕಾರ, ಅಧಿಕಾರದ ಮದಕ್ಕೆ ಉತ್ತರ ಕೊಟ್ಟಿದ್ದೇನೆ. ನನಗೆ ವೈಯಕ್ತಿಕವಾಗಿ ಸೋಲಾಗಿದೆ. ಆದರೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿರುತ್ತೇನೆ ಎಂದರು.

## ಐತಿಹಾಸಿಕ ಕ್ಷೇತ್ರದಲ್ಲಿ ವಿಶ್ವಾಸ ವೈದ್ಯ ಕಾಂಗ್ರೆಸ್ ಪಕ್ಷದಿಂದ ಜಯ

ಯರಗಟ್ಟಿ : ರಾಜ್ಯ ರಾಜ-ಕೀಯದಲ್ಲಿ ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ತೀವ್ರ ಪೈಪೋಟಿ ನಡೆದಿದ್ದ ಸವದತ್ತಿ ಯಲ್ಲಮ್ಮನ ವಿಧಾನಸಭಾ ಕ್ಷೇತ್ರದ ಚುನಾವಣಾ ತಿರ್ಪು ಈಗ ಹೊರಬಿದ್ದಿದೆ.



ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಜಿದ್ದಜಿದ್ದಿನ ಕಣವಾಗಿದ್ದ ಕ್ಷೇತ್ರ ಸವದತ್ತಿ, ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪ್ರಬಲ ಪೈಪೋಟಿ ನೀಡಿದ್ದರು. ಒಂದು ಕಡೆ ನೋಡುವುದಾದರೆ, ಕಾಂಗ್ರೆಸ್ನ ಗ್ಯಾರಂಟಿ ಹವಾನೇ ಅಭ್ಯರ್ಥಿಗಳನ್ನು ಜಯಗಳಿಸಿದೆ ಅಂತನೇ ಹೇಳಬಹುದು.

ಈ ವೇಳೆ ಯರಗಟ್ಟಿ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ನಿಖಿಲ ದೇಸಾಯಿ, ಫೀರೋಜ ಖಾದ್ರಿ, ದೀಪಕ್ ಕಟ್ಟಿಮನಿ, ಶಿವಾನಂದ ಕರಿಗೋಣ್ಣವರ, ರಫೀಕ ಡಿ. ಕೆ, ನಿಖಿಲ ಪಾಟೀಲ, ರಾಮನಗೌಡ ಪಾಟೀಲ, ವಿಕ್ರಮ ದೇಸಾಯಿ, ಅರುಣ ಪಟ್ಟೇದ, ಶಿವಾನಂದ ಪಟ್ಟಣಶೆಟ್ಟಿ, ಬಸವರಾಜ ಗಂಗರಡ್ಡಿ, ಫಕ್ಕೀರಪ್ಪ ಕಿಲಾರಿ, ಅಬೀದಬೇಗ ಜಮಾದಾರ, ಗುಂಡುಗೌಡ ಮಿಕಲಿ, ಮಂಜುನಾಥ ಭಾವಿಹಾಳ, ಕೆ. ಎಫ್. ನದಾಫ, ಹನುಮಂತ ಹಾರುಗೊಪ್ಪ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಅನೇಕರು ಉಪಸ್ಥಿತರಿದ್ದರು.

## ಜನರೇ ಎಲ್ಲದಕ್ಕೂ ಉತ್ತರಿಸಿದ್ದಾರೆ, ಅವರ ವಿಶ್ವಾಸ ಇನ್ನಷ್ಟು ಗಟ್ಟಿಗೊಳಿಸುವ ಕೆಲಸ ಮಾಡುತ್ತೇನೆ: ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ನನ್ನ ವಿರುದ್ಧ ಆರೋಪ ಮಾಡುತ್ತಿದ್ದವರಿಗೆ ಜನರೇ ಉತ್ತರ ಹೇಳಿದ್ದಾರೆ. ನನ್ನ ಜನ ನನ್ನನ್ನು ಮನೆ ಮಗಳಾಗಿ ಸ್ವೀಕರಿಸಿದ್ದಾರೆ. ಮನೆ ಮಗಳನ್ನು ಆಶಿರ್ವದಿಸಿದ್ದಾರೆ. ಆ ವಿಶ್ವಾಸವನ್ನು ಇನ್ನಷ್ಟು ಗಟ್ಟಿಗೊಳಿಸುವ ಕೆಲಸ ಮಾಡುತ್ತೇನೆ ಎಂದು ಬೆಳಗಾವಿ ಗ್ರಾಮೀಣ ಕ್ಷೇತ್ರದಿಂದ ಭರ್ಜ-ರಿಗೆಲುವು ಸಾಧಿಸಿರುವ ಲಕ್ಷ್ಮೀ ಹೆಬ್ಬಾಳಕರ್ ಪ್ರತಿಕ್ರಿಯಿಸಿದ್ದಾರೆ.



ಸುಳೇಬಾವಿ ಮಹಾಲಕ್ಷ್ಮಿ, ಉಚಗಾವಿಯ ಮಳೆಕರಣಿ, ಶಿವಾಜಿ ಮಹಾರಾಜ, ಡಾ. ಅಂಬೇಡ್ಕರ್, ವಾಲ್ಮೀಕಿ, ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಬಸವಣ್ಣ, ಪೈಗಂಬರರು, ಎಲ್ಲ ವಿಶ್ವ ಮಾನವರ, ಎಲ್ಲ ಧರ್ಮ, ಎಲ್ಲ ಜಾತಿಯವರನ್ನು ಕರೆದುಕೊಂಡು ಮುಂದೆ ಹೊಗುತ್ತಿದ್ದೇನೆ. ಎಲ್ಲರ ಆಶಿರ್ವಾದದಿಂದ ಈ ಗೆಲುವು ಬಂದಿದೆ. ಜನರ ಭಾವನೆಗಳಿಗೆ ಸ್ಪಂದಿಸಿ, ಸತತ ಸಂಪರ್ಕದಲ್ಲಿ ಇದ್ದಿದ್ದರಿಂದ ಈ ಗೆಲುವು ಸಾಧ್ಯವಾಗಿದೆ ಎಂದು ಅವರು ಹೇಳಿದರು.

ಕಳೆದ ಬಾರಿಗಿಂತ ಲೀಡ್ ಜಾಸ್ತಿಯಾಗಲಿದೆ ಎಂದು ಮೊದಲೇ ಹೇಳಿದ್ದೆ. ಎಲ್ಲರ ಮನಸ್ಸನ್ನು ಮುಟ್ಟಿದ್ದೇನೆ. ನನ್ನ ವಿರುದ್ಧ ಮಾತನಾಡಿದವರಿಗೆ, ಆರೋಪ ಮಾಡಿದವರಿಗೆ ಜನರೇ ಉತ್ತರಿಸಿದ್ದಾರೆ.

ನಾನು ಏನನ್ನೂ ಹೇಳುವುದಿಲ್ಲ. ಜನರಿಗೆ ನಾನು ತಂಗಿ ರೀತಿ, ತಾಯಿ ರೀತಿ, ಮಗಳ ರೀತಿ ಕಂಡಿದ್ದೇನೆ. ಅದೇ ಸಾಕು. ಸಣ್ಣ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಎಲ್ಲರೂ ಲಕ್ಷ್ಮೀ ಅಕ್ಕ ಗೆದ್ದು ಬರಬೇಕು ಎಂದು ಪ್ರಾರ್ಥಿಸಿದ್ದರು. ಅದು ಯಶಸ್ವಿಯಾಗಿದೆ ಎಂದರು.

ರಾಜಕಾರಣದಲ್ಲಿ ಕಾಲವೇ ಎಲ್ಲದಕ್ಕೂ ಉತ್ತರ ನೀಡುತ್ತದೆ. ನಾನು 22 ವರ್ಷದಿಂದ ಬಿಸಿಲು, ಮಳೆ ಎಲ್ಲವನ್ನೂ ನೋಡಿದ್ದೇನೆ. ಜಿಲ್ಲೆಯ ಜನರ ಪಾದಗಳಿಗೆ ನಮಸ್ಕಾರ ಮಾಡುತ್ತೇನೆ. ಮಂತ್ರಿ ಮಾಡುವುದು ಹೈಕಮಾಂಡ್ ಗೆ ಬಿಟ್ಟ ವಿಷಯ. ನನಗೆ ಯಾವುದೇ ಜವಾಬ್ದಾರಿ ಕೊಟ್ಟರೂ ನಿರ್ವಹಿಸಲು ಸಿದ್ಧನಿದ್ದೇನೆ ಎಂದು ಅವರು ತಿಳಿಸಿದರು.

ಬರುವ ಸರಕಾರ ಜನರ ನಿರೀಕ್ಷೆಯಂತೆ ಕೆಲಸ ಮಾಡುತ್ತದೆ. 5 ಗ್ಯಾರಂಟಿಗಳನ್ನು ಈಡೇರಿಸಿ ಜನರ ವಿಶ್ವಾಸ ಇನ್ನೂ ಗಟ್ಟಿಗೊಳಿಸಿಕೊಳ್ಳುತ್ತೇವೆ. ಕಾಂಗ್ರೆಸ್ ಪಕ್ಷಕ್ಕೆ ಮರು ಜನ್ಮ ನೀಡಿದ್ದಕ್ಕೆ ಜನರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈ ಗೆಲುವಿಗ ಹಲವು ಕಾರಣಗಳಿವೆ. ಸರಕಾರದ ವಿರುದ್ಧ ಜನ ಭ್ರಮನಿರಸನರಾಗಿದ್ದಾರೆ. ನಮ್ಮ ನಾಯಕರು ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಸಮನ್ವಯ, ಸರ್ವೇಜನಾ ಸುಖಿನೋಭವಂತು ಎಂದು ಎಲ್ಲರನ್ನೂ ಕರೆದುಕೊಂಡು ಹೋಗುತ್ತಾರೆ ಎಂದು ಅವರು ಹೇಳಿದರು.

## ಬಿಜೆಪಿ ಸರಕಾರ ರಚನೆಗೆ ಕಾರಣರಾದವರಲ್ಲಿ ಗೆದ್ದವರು, ಸೋತವರು ಯಾರು?

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, 136 ಸ್ಥಾನಗಳಲ್ಲಿ ಗೆಲುವು/ ಮುನ್ನಡೆ ಸಾಧಿಸಿರುವ ಕಾಂಗ್ರೆಸ್, ಸರ್ಕಾರ ರಚಿಸುವ ಹೊಸ್ತಿಲಲ್ಲಿದೆ.

ಚುನಾವಣೆಯಲ್ಲಿ ಘಟಾನುಘಟಿ ನಾಯಕರೇ ಸೋತಿದ್ದಾರೆ. ಹಲವರು ಅಚ್ಚರಿಯ ಗೆಲುವು ಸಾಧಿಸಿದ್ದಾರೆ. ಅದರಲ್ಲೂ, ಹಿಂದಿನ ಮೈತ್ರಿ ಸರ್ಕಾರ ಉರುಳಿಸಿದ ನಾಯಕರ ಕ್ಷೇತ್ರಗಳಲ್ಲಿ ಪ್ರಕಟವಾಗಿರುವ ಫಲಿತಾಂಶ ಕುತೂಹಲಕ್ಕೆ ಕಾರಣವಾಗಿದೆ.

ಹುಣಸೂರಿನಿಂದ ಜೆಡಿಎಸ್ ಅಭ್ಯರ್ಥಿಯಾಗಿ ಗೆದ್ದಿದ್ದ ವಿಶ್ವನಾಥ್ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ. ಸಚಿವ ಆನಂದ್ ಸಿಂಗ್ ಅವರು ಈ ಬಾರಿ ಚುನಾವಣೆಗೆ ಸ್ಪರ್ಧಿಸದೇ ಪುತ್ರ ಸಿದ್ಧಾರ್ಥ್ ಸಿಂಗ್ ಠಾಕೂರ್ ಅವರನ್ನು ವಿಜಯನಗರದಿಂದ ಕಣಕ್ಕಿಳಿಸಿದ್ದರು. ಅವರು ಸೋತಿದ್ದಾರೆ.

### ಸೋತವರು

1. ಬಿ.ಸಿ ಪಾಟೀಲ್– ಹಿರೇಕೆರೂರು
2. ಮಹೇಶ್ ಕುಮಠಹಳ್ಳಿ– ಅಥಣಿ
3 .ಪ್ರತಾಪಗೌಡ ಪಾಟೀಲ್– ಮಸ್ಕಿ
4. ಸುಧಾಕರ್– ಚಿಕ್ಕಬಳ್ಳಾಪುರ
5. ಶ್ರೀಮಂತ ಪಾಟೀಲ್– ಕಾಗವಾಡ
6. ಎಂಟಿಬಿ ನಾಗರಾಜ್–ಹೊಸಕೋಟೆ
7. ನಾರಾಯಣ ಗೌಡ– ಕೆ.ಆರ್.ಪೇಟೆ
8. ಆರ್ ಶಂಕರ್– ರಾಣೆಬೆನ್ನೂರು (ಎನ್‌ಸಿಪಿ)
9. ಎನ್. ಮಹೇಶ್– ಕೊಳ್ಳೇಗಾಲ

### ಗೆದ್ದವರು

1. ಎಸ್.ಟಿ ಸೋಮಶೇಖರ್–ಯಶವಂತಪುರ
2. ಬೈರತಿ ಬಸವರಾಜ್– ಕೆ.ಆರ್ ಪುರ
3. ರಮೇಶ್ ಜಾರಕಿಹೊಳಿ– ಗೋಕಾಕ
4. ಮುನಿರತ್ನ– ರಾಜರಾಜೇಶ್ವರಿ ನಗರ
5. ಶಿವರಾಮ ಹೆಬ್ಬಾರ–ಯಲ್ಲಾಪುರ
6. ಗೋಪಾಲಯ್ಯ– ಮಹಾಲಕ್ಷ್ಮಿ ಬಡಾವಣೆ

## ಚಿಕ್ಕಬಳ್ಳಾಪುರದಲ್ಲಿ ಸುಧಾಕರ್‌ಗೆ ಸೋಲು



ಚಿಕ್ಕಬಳ್ಳಾಪುರ: ತೀವ್ರ ಕುತೂಹಲ ಮೂಡಿಸಿದ್ದ ಚಿಕ್ಕಬಳ್ಳಾಪುರದಲ್ಲಿ ಬಿಜೆಪಿ ಅಭ್ಯರ್ಥಿ ಸುಧಾಕರ್ ಸೋತಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಯ ಮತ ಎಣಿಕೆ ಇದೀಗ ಕೊನೆ ಹಂತ ತಲುಪಿದೆ. ಬಿಜೆಪಿಯ ಘಟಾನುಘಟಿ ನಾಯಕರ ಹೀನಾಯ ಸೋಲಾಗಿದ್ದು ಕಾಂಗ್ರೆಸ್ ಗೆಲುವಿನ ಹಾದಿಯಲ್ಲಿದೆ.

ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆಗೆ ಇಳಿದಿದ್ದ ಪ್ರದೀಪ್ ಈಶ್ವರ್‌ಗೆ ಗೆಲುವಾಗಿದೆ. 57,878 ಮತಗಳನ್ನು ಗಳಿಸಿದ ಸುಧಾಕರ್ ಅವರನ್ನು ಪ್ರದೀಪ್ ಈಶ್ವರ್ 69,008 ಮತಗಳನ್ನು ಗಳಿಸುವ ಮೂಲಕ ಸೋಲಿಸಿದ್ದಾರೆ.

## ಹಾಲಿ ಸಚಿವ ಗೋವಿಂದ ಕಾರಜೋಳಗೆ ಮುಖಭಂಗ; ಆರ್ಬಿ.ತಿಮ್ಮಾಪುರೆಗೆ ಭರ್ಜರಿ ಗೆಲುವು



ಮುಧೋಳ: ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಘಟಾನುಘಟಿ ಹಿರಿಯ ನಾಯಕರು ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಪರಾಭವಗೊಂಡಿದ್ದಾರೆ. ಬಿಜೆಪಿಯ ಹಿರಿಯ ನಾಯಕ, ಸಚಿವ ಗೋವಿಂದ ಕಾರಜೋಳ ಹೀನಾಯ ಸೋಲನುಭವಿಸಿದ್ದಾರೆ.

ಮುಧೋಳ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್ಬಿ.ತಿಮ್ಮಾಪುರೆ ವಿರುದ್ಧ ಸಚಿವ ಗೋವಿಂದ ಕಾರಜೋಳ ಸೋಲನುಭವಿಸಿದ್ದಾರೆ.

ಸಚಿವ ಗೋವಿಂದ ಕಾರಜೋಳ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ ಆರ್ಬಿ. ತಿಮ್ಮಾಪುರೆ ಸುಮಾರು 16 ಸಾವಿರ ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ.

## ನನ್ನ ಗೆಲುವಿಗೆ ಸಹಕರಿಸಿದ ಮತದಾರರಿಗೆ, ಕಾರ್ಯಕರ್ತ ಮುಖಂಡರಿಗೆ ಚಿರಋಣಿ

ಕಲಘಟಗಿ: ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಹಾಗೂ ಬೆಲೆ ಏರಿಕೆ ನೀತಿಯಿಂದ ರಾಜ್ಯದ ಮತ ದಾರರು ಬೇಸತ್ತು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ ಎಂದು ಶಾಸಕ ಸಂತೋಷ್ ಲಾಡ್ ಹೇಳಿದರು.

ಅವರು ಗೆಲುವು ಸಾದಿಸುತ್ತಿದಂತೆ ತಹಸೀಲ್ದಾರ ಕಚೇರಿಗೆ ತೆರಳಿ ಚುನಾವಣೆ ಅಧಿಕಾರಿಗಳಿಂದ ತಮ್ಮ ಶಾಸಕ ಪ್ರಮಾಣ ಪತ್ರ ಸ್ವೀಕರಿಸಿ ನಂತರ ತಾಲ್ಲೂಕಿನ ಮಡಕಿಹೊನ್ನಳ್ಳಿ ತಮ್ಮ ಅಮೃತ ನಿವಾಸದಲ್ಲಿ ಶನಿವಾರ ಸುದ್ದಿಗೋಷ್ಠಿ ಕರೆದು ಮಾತನಾಡಿದರು.

ಪ್ರಚಾರದ ಸಮಯದಲ್ಲಿ ನಾನು ಮಾತನಾಡಿದ ಮಾತುಗಳು ಯಾರಿಗಾದರೂ ನೋವನ್ನುಂಟು ಮಾಡಿದರೆ ಅದಕ್ಕೆ ಕ್ಷಮೆ ಯಾಚಿಸುತ್ತೇನೆ.

ನಾನು ಅಭಿವೃದ್ಧಿ ಕೆಲಸ ಮಾಡಿದ್ದು ನೋಡಿದರೆ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುವ ನಿರೀಕ್ಷೆಯಿತ್ತು ಮತದಾರ ನಿರ್ಣಯಕ್ಕೆ ತಲೆ ಬಾಗಲೇ ಬೇಕು ಬರುವ ದಿನಗಳಲ್ಲಿ ಆಲೋಚನೆ ಮಾಡಬೇಕಾಗುತ್ತದೆ ಆದ-'ರೆ ಎಲ್ಲ ಜನರ ಪ್ರೀತಿ ವಿಶ್ವಾಸಕ್ಕೆ ನಾನು ಚಿರಋಣಿಯಾಗಿದ್ದೇನೆ ಎಂದರು.

ಮತ್ತೊಮ್ಮೆ ನನಗೆ ಕಲಘಟಗಿ ಅಳ್ನಾವರ



ಜನತೆ ಸೇವೆ ಮಾಡಲಿಕ್ಕೆ ಗೆಲ್ಲಿಸಿದ್ದಾರೆ ನಾನು ಇಲ್ಲೇ ಇದ್ದು ಜನರ ಸೇವೆಗೆ ಹಗಲಿರುಳು ದುಡಿಯುತ್ತೇನೆ ಎಂದರು.

ನಾನು ಪ್ರಚಾರದ ಸಮಯದಲ್ಲಿ ಗಮನಕ್ಕೆ ಬಂದಿದ್ದು ಬಡವರಿಗೆ ಸೂರು ಕಲ್ಪಿಸುವದು, ಸಣ್ಣ ಪುಟ್ಟ ಕೈಗಾರಿಕೆ, ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡುತ್ತೇನೆ ಎಂದರು.

ನಮ್ಮ ಸರ್ಕಾರ ಹಿಂದೆಯೋ ನುಡಿದಂತೆ ನಡೆದಿದೆ ಈಗಲೂ ಖಂಡಿತವಾಗಿ ಐದು ಗ್ಯಾರಂಟಿ ಕಾರ್ಡ್ ನೀಡಿದ ಯೋಜನೆ ಸರ್ಕಾರ ರಚನೆ ಯಾದ ಕೂಡಲೇ ಅವುಗಳ ಜಾರಿಗೆ ತರಲಾಗುವದು ಎಂದರು.

ಪಟ್ಟಣದ ಎಪಿಎಂಸಿ ಯಿಂದ ಆಂಜನೇಯ ವೃತ್ತ,ಯುವ ಶಕ್ತಿ ಸರ್ಕಲ್ ಮೂಲಕ ಪಾದಯಾತ್ರೆ ಮುಖಾಂತರ ಗ್ರಾಮದೇವಿ ದೇವಸ್ಥಾನಕ್ಕೆ ತೆರಳಿ ದೇವಿ ದರ್ಶನ ಪಡೆದರು.

ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ಜೈ ಸಂತೋಷ್ ಲಾಡ್, ಜೈ ಕಾಂಗ್ರೆಸ್ ಘೋಷಣೆ ಮೊಳಗಿಸಿದರು.

ಕಾಂಗ್ರೆಸ್ ಮುಖಂಡರಾದ ಎಸ್.ಆರ್ ಪಾಟೀಲ, ಮಂಜುನಾಥ ಮುರಳ್ಳಿ,ನರೇಶ ಮಲೆನಾಡು,ಬಿ.ವೈ ಪಾಟೀಲ, ಕುಮಾರ್ ಖಂಡೇಕರ, ಗಂಗಾಧರ ಚಿಕ್ಕಮಠ, ಮಂಜುನಾಥ ದನಿಗೊಂಡ, ಅಜಮತ್ ಜಾಗೀರದಾರ, ರಫೀಕ್ ಸುಂಕದ, ಬಾಬಾಜಾನ್ ತೇರಗಾಂವ, ಬಾಳು ಖಾನಾಪುರ, ಲಿಂಗರಡ್ಡಿ ನಡುವಿನಮನಿ, ಶಿವಲಿಂಗ ಮುಗಣ್ಣವರ, ಮಂಜುನಾಥ ಚಿಕ್ಕಮಠ, ವಿನಾಯಕ ಗುಡ್ಡದಕೇರಿ ಇದ್ದರು.

## ಅಭ್ಯರ್ಥಿಯ ಸೋಲಿನ ಸುದ್ದಿ ಕೇಳಿ ಅಭಿಮಾನಿ ಹೃದಯಾಘಾತದಿಂದ ಸಾವು



ಚಿತ್ರದುರ್ಗ : ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಆಲಮರದಹಟ್ಟಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮುನ್ನಡೆ ಸಾಧಿಸಿದ ವಿಷಯ ತಿಳಿದು ಬಿಜೆಪಿ ಕಾರ್ಯಕರ್ತನೊಬ್ಬ ಹೃದಯಾಘಾತದಿಂದ ಮೃತಪಟ್ಟ ಘಟನೆ ನಡೆದಿದೆ. ಹಿರಿಯೂರಿನ ಆಲಮರದಹಟ್ಟಿ ಗ್ರಾಮದ ಈರಣ್ಣ ಮೃತ ದುರ್ದೈವಿ ಆಗಿದ್ದಾರೆ. ಹಿರಿಯೂರು ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಪೂರ್ಣಿಮಾ ಶ್ರೀನಿವಾಸ್, ಕಾಂಗ್ರೆಸ್‌ನಿಂದ ಮಾಜಿ ಸಚಿವ ಡಿ. ಸುಧಾಕರ್ ಸ್ಪರ್ಧಿಸಿದ್ದರು. ಜೆಡಿ-ಎಸ್ ಪಕ್ಷದಿಂದ ರವೀಂದ್ರ ಕಣದಲ್ಲಿದ್ದರು. ಆದರೆ, ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ 5,000 ಮತಗಳ ಅಂತರದಿಂದ ಹಿನ್ನಡೆ ಸಾಧಿಸಿದ್ದಾರೆ.

## ಸೋಲು, ಗೆಲುವು ಸಹಜ, ಕಾಂಗ್ರೆಸ್‌ಗೆ ಆಲ್ ದಿ ಬೆಸ್ಟ್: ಶೋಭಾ ಕರಂದ್ಲಾಜೆ



ಬೆಂಗಳೂರು: ಚುನಾವಣೆಯಲ್ಲಿ ಸೋಲು-ಗೆಲುವು ಸಹಜ. ನಾವು ಒಂದು ವಿಪಕ್ಷವಾಗಿ ಜನರ ಸೇವೆ ಮಾಡುತ್ತೇವೆ.

ಕಾಂಗ್ರೆಸ್‌ಗೆ ಆಲ್ ದಿ ಬೆಸ್ಟ್ ಎಂದು ಸಂಸದೆ ಶೋಭಾ ಕರಂದ್ಲಾಜೆ ಅವರು ಶನಿವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋಲು, ಗೆಲುವು ಸಹಜವಾಗಿದೆ. ಕಾಂಗ್ರೆಸ್‌ಗೆ ಜನರು ಆಶೀರ್ವಾದ ಮಾಡಿದ್ದಾರೆ.

ನಾವು ಒಂದು ವಿಪಕ್ಷವಾಗಿ ಜನರ ಸೇವೆ ಮಾಡುತ್ತೇವೆ. ಒಳ್ಳೆಯ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದರು.

## ಪ್ರಚಂಡ ಬಹುಮತಗಳಿಂದ ಗೆದ್ದು ಬೀಗಿದ ಎನ್ ವೈ ಗೋಪಾಲಕೃಷ್ಣ

ಮೊಳಕಾಲ್ಮುರು: 2023ನೇ ವಿಧಾನ ಸಭೆ ಚುನಾವಣೆಯ ಜಿದ್ದಾ ಜಿದ್ದಿ ರಣರಂಗಕ್ಕೆ ತಿಲಾಂಜಲಿ ಇಟ್ಟಾಗಿದೆ. ಬಿಜೆಪಿ ಪಕ್ಷದ 40% ಕ್ಯಾಂಮೀಶನ್ ದಂದೆ, ಬೆಲೆ ಏರಿಕೆ, ಹಾಗೂ ದುರಾಡಳಿತದ ವ್ಯವಸ್ಥೆಗೆ ಬೇಸತ್ತ ಜನತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರವನ್ನು ನೀಡಿದ್ದಾರೆ. ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಪಡೆಯುವುದರೊಂದಿಗೆ ಏಕ ಪಕ್ಷ ರಾಜಕೀಯ ಮಾಡಲು ಸನ್ನದ ನೆಡೆಸುತ್ತಿದ್ದಾರೆ.

ಕಳೆದ ಎರಡು ಚುನಾವಣೆಗಳಲ್ಲಿ ಬಿ ಎಸ್ ಆರ್ ಹಾಗೂ ಬಿಜೆಪಿ ಪಕ್ಷವು ಮೊಳಕಾಲ್ಮುರು ವಿಧಾನ ಸಭೆ ಕ್ಷೇತ್ರದಲ್ಲಿ ಅಧಿಕಾರ ನಡೆಸಿದ್ದರು. ಆದ-'ರೆ ಬಿಜೆಪಿ ಪಕ್ಷದ ದುರಾಡಳಿತಕ್ಕೆ ಬೇಸತ್ತ ಜನತೆ ಬದಲಾವಣೆ



ಬಯಸಿದ್ದರು. ಕಾಕತಾಳಿಯದಂತೆ ಎನ್ ವೈ ಗೋಪಾಲಕೃಷ್ಣರವರು ಸಮಯ ನೋಡಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಿದ್ದು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತ-ರಿಗೆ ಸಂಜೀವಿನಿ ಸಿಕ್ಕಂತಾಯಿತು. ಎನ್ ವೈ ಗೋಪಾಲ ಕೃಷ್ಣ ರವರಿಗೆ ತಮ್ಮ ಎಲ್ಲಾ ಹಳೆಯ ಕಾರ್ಯಕರ್ತರು ಹಾಗೂ ಗೆಳೆಯರು ಸೇರಿ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿದರು.

ಕಳೆದ ಎಲ್ಲಾ ಚುನಾವಣೆಗಳಲ್ಲಿ ಬದ್ದ ವೈರಿಗಳಾಗಿ ನಡೆದು ಕೊಂಡ ಬಂದ ಹೆಚ್ ಟಿ ನಾಗಿರೆಡ್ಡಿ ಈ ಚುನಾವಣೆಯಲ್ಲಿ ಎನ್ ವೈ ಗೋಪಾಲಕೃಷ್ಣರವರಿಗೆ ಸಾತ್ ನೀಡಿದ್ದು ಅನುಕೂಲಕರ ವಾತಾವರಣ ನಿರ್ಮಾಣ ಮಾಡಿ ಕೊಟ್ಟಿದ್ದಾರೆ. ಕಳೆದ 10 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಇಲ್ಲದ ಕಾರಣ ಬೇಸತ್ತ ಕಾಂಗ್ರೆಸ್ ಕಾರ್ಯಕರ್ತರು ಈ ಚುನಾವಣೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲೇಬೇಕು ಎನ್ನುವ ಹಠಕ್ಕೆ ಬಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಗಲಿರುಳು ಶ್ರಮವಹಿಸಿ ಕೆಲಸ ಮಾಡಿದರು.

ಕಾಂಗ್ರೆಸ್ ಪಕ್ಷ ನೀಡಿದ 10kg ಹಕ್ಕಿ, ಪ್ರತಿ ಮನೆ ಯಜಮಾನಿಗೆ 2000ರೂ, ಪ್ರತಿ ಮನೆಗೆ 200ಗೆ ವಿದ್ಯುತ್ ಯುನಿಟ್ ಫ್ರೀ, ಬಸ್ ಫ್ರೀ ಹಾಗೂ ನಿರುದ್ಯೋಗಿಗಳಿಗೆ 3000/1500ರೂ ಉಚಿತ ನೀಡಿದ ಗ್ಯಾರಂಟಿ ಕಾರ್ಡ್ ಗಳಿಂದ ಕಾಂಗ್ರೆಸ್ ಪಕ್ಷವು ನಿಚ್ಚಳ ಬಹುಮತ ಪಡೆದಿದೆ. ಎನ್ ವೈ ಗೋಪಾಲಕೃಷ್ಣರವರಿಗೆ ಅದೃಷ್ಟದ ಜಯ ಸಿಕ್ಕಂತಾಗಿದೆ. ಎನ್ ವೈ ಗೋಪಾಲಕೃಷ್ಣರವರು 7ನೇ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗೆದ್ದು ಇತಿಹಾಸ ನಿರ್ಮಾಣ ಮಾಡಿದ್ದಾರೆ. ಬಿಜೆಪಿ ಅಭ್ಯರ್ಥಿ ಎಸ್ ತಿಪ್ಪೇಸ್ವಾಮಿ ಹಾಗೂ ಎನ್ ವೈ ಗೋಪಾಲಕೃಷ್ಣ ರವರ ಮದ್ಯ ನೇರೆ ನೇರವಾಗಿ ಹಣಾಹಣಿ ಇತ್ತು ಆದರೆ ಮತದಾರರ ನಿರ್ಣಯಕ್ಕೆ ಎನ್ ವೈ ಗೋಪಾಲ ಕೃಷ್ಣರವರು ಸುಮಾರು 22,000 ಮತಗಳ ಅಂತರದಿಂದ ಗೆದ್ದು ತಮ್ಮ ಗೆಲುವಿನ ನಾಗಲೋಟ ಮುಂದುವರೆಸಿ ಎದುರಾಳಿಗಳಿಗೆ ನಿದ್ದೆ ಕೆಡಿಸಿದ್ದಾರೆ. ಎನ್ ವೈ ಗೋಪಾಲ ಕೃಷ್ಣ ರವರು ಒಟ್ಟು 7ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ ಇವ-ರಿಗೆ ಸಚಿವ ಸ್ಥಾನ ಸಿಗುವ ಅವಕಾಶಗಳು ಇವೆ. ಅದು ಏನೇ ಇರಲಿ ಎನ್ ವೈ ಗೋಪಾಲ ಕೃಷ್ಣ ರವರು ಸೋಲಿಲ್ಲದ ಸರದಾರ ಎಂದು ಮತ್ತೆ ಸಾಬೀತು ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕ್ಷೇತ್ರದಾದ್ಯಂತ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

## ಹುಕ್ಕೇರಿ ಶ್ರೀಗಳ ಆಶೀರ್ವಾದ ಪಡೆದ ದುರ್ಯೋಧನ ಐಹೋಳೆ

ಬೆಳಗಾವಿ: ರಾಯಬಾಗದ ನಾಲ್ಕನೇ ಬಾರಿ ಶಾಸಕರಾಗಿ ಆಯ್ಕೆಯಾದ ದುರ್ಯೋಧನ ಐಹೊಳೆ ಶನಿವಾರ ಹುಕ್ಕೇರಿ ಹಿರೇಮಠಕ್ಕೆ ಭೇಟಿ ನೀಡಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ನೂತನ ಶಾಸಕ ದುರ್ಯೋಧನ ಐಹೊಳೆ ಮಾತನಾಡಿ, ಜನ ಬಲದ ಜೊತೆ, ಜೊತೆಗೆ ದೈವ ಬಲವೂ ಇದೆ.

ಇದರೊಂದಿಗೆ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನಮ್ಮ ಮನೆಯ ಗುರುಗಳು. ಅವರ ಆಶೀರ್ವಾದಿಂದ ನಾನು ಮತ್ತೇ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಅವರ ಮಾರ್ಗದರ್ಶನದಲ್ಲಿ ನಾನು ರಾಯಬಾಗ ಕ್ಷೇತ್ರವನ್ನು ಇನ್ನೂ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇನೆ ಎಂದರು.

ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದುಯೋಧನ ಐಹೊಳೆ ಅವರು ಸಾತ್ವೀಕರು. ಎಲ್ಲರ ಜೊತೆಗೆ ಬೆರೆಯುವ ಸ್ವಭಾವದವರು. ಇಂಥ ಸಂದರ್ಭದಲ್ಲಿಯೂ ಅವರು ಆಯ್ಕೆಯಾಗಿದ್ದಾರೆ ಎಂದರೆ ಅವರು ಜನರ ಮೇಲೆ ಇಟ್ಟಿರುವ ನಂಬಿಕೆ.



ಹೀಗೆ ಉನ್ನತ ಕಾರ್ಯ ಮಾಡಲಿ. ಅಧಿಕಾರ ಇರುವುದು ಅಧಿಕಾರ ಮಾಡಲು ಅಲ್ಲ. ಅಧಿಕಾರ ಅದೊಂದು ಅವಕಾಶ ಅದನ್ನು ಸದ್ಬಳಕೆ ಮಾಡಿಕೊಂಡು ಮುಂದೆ ಹೋಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಟಕೋಳ ಎಂ ಚಂದರಗಿಯ ರೇಣುಕ ಗಡದೇಶ್ವರ ದೇವರು, ವಿದ್ವಾನ್ ಚಂದ್ರಶೇಖರ ಶಾಸ್ತ್ರೀಗಳು, ಬಿಜೆಪಿ ದು-ರೀಣರಾದ ಮಹೇಶ ಭಾತೆ, ಅರುಣ ಐಹೊಳೆ ಸೇರಿ ದಂತೆ ಇನ್ನಿತರರು ಉಪಸ್ಥಿತರಿದ್ದರು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089